ಸಂಪಾದಕರು :
ಎಂ.ಎಸ್. ವಿಕಾಸ್

ಬುಧವಾರ, ನವೆಂಬರ್ 01, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 170 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023
janathavani@mac.com
www.janathavani.com
☎ 08192 254736 91642 99999



ಶ್ರೀ ಎ. ಫಕೃದ್ದೀನ್, ಸಂಪಾದಕರು, ದಾವಣಗೆರೆ ಇಮೇಜ್
ಡಾ. ಸಿ. ವರದರಾಜು, ವರದಿಗಾರರು, ಸುವರ್ಣ ಟಿವಿ
ಶ್ರೀ ಹೆಚ್.ಎನ್. ಪ್ರಕಾಶ್, ವರದಿಗಾರರು, ವಾರ್ತಾ ಭಾರತಿ
ಶ್ರೀ ಡಿ. ರಂಗನಾಥರಾವ್, ಉಪ ಸಂಪಾದಕರು, ಸಂಯುಕ್ತ ಕರ್ನಾಟಕ
ಶ್ರೀ ಶಿವಕುಮಾರ್, ಸ್ಥಾನಿಕ ಸಂಪಾದಕರು, ಸಂಜೆವಾಣಿ
ಶ್ರೀ ಜಿ.ಎಸ್. ವಸಂತ್ ಕುಮಾರ್, ಸಂಪಾದಕರು, ನಗರ ಮಿಡಿತ
ಶ್ರೀ ಕೆ.ಎಸ್. ವೀರೇಶ್ ಪ್ರಸಾದ್, ತಾ. ಪ್ರಜಾವಾಣಿ ವರದಿಗಾರರು, ಸಂತೇಬೆನ್ನೂರು

## ರಾಜ್ಯೋತ್ಸವ ಪುರಸ್ಕೃತರಿಗೆ ಅಭಿನಂದನೆಗಳು

ದಾವಣಗೆರೆ ಜಿಲ್ಲಾಡಳಿತದಿಂದ ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿ ಇಂದು ಪ್ರಶಸ್ತಿ ಸ್ವೀಕರಿಸುತ್ತಿರುವ ಎಲ್ಲ ಹಿರಿಯ ಹಾಗೂ ಆತ್ಮೀಯ ಮಾಧ್ಯಮ ಮಿತ್ರರಿಗೆ ಹಾರ್ದಿಕ ಅಭಿನಂದನೆಗಳು.



ಆರ್. ರವಿ, ಸಂಪಾದಕರು, ದಾವಣಗೆರೆ ಕನ್ನಡಿಗ, ಪ್ರಾದೇಶಿಕ ದಿನಪತ್ರಿಕೆ, ದಾವಣಗೆರೆ

|| ಶ್ರೀ ಬಸವೇಶ್ವರ ಸ್ವಾಮಿ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ : 23.09.1993 ನಿಧನ : 23.10.2023

ದಾವಣಗೆರೆ ನಗರ ವಾಸಿಗಳಾದ
ದಿ. ಶ್ರೀಮತಿ ವನಜಾಕ್ಷಮ್ಮ ಶ್ರೀ ಕಿತ್ತೂರು ಜಯ್ಯಣ್ಣ
ಮಾಡುವ ವಿಜ್ಞಾಪನೆಗಳು.
ತಾ. 23.10.2023ನೇ ಸೋಮವಾರ ಸಾಯಂಕಾಲ 6.15ಕ್ಕೆ
ನಮ್ಮ ಮಗನಾದ
ಶ್ರೀ ಕಿತ್ತೂರು ಬಸಂತಕುಮಾರ್
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಸಮಾರಾಧನೆಯನ್ನು
ದಿನಾಂಕ : 01.11.2023ನೇ ಬುಧವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆಯ ಎಂಸಿಸಿ ಎ ಬ್ಲಾಕ್, 9ನೇ ಮೇನ್, 9ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ದಿ. ಶ್ರೀಮತಿ ವನಜಾಕ್ಷಮ್ಮ
ಶ್ರೀ ಕಿತ್ತೂರು ಜಯ್ಯಣ್ಣ ಮತ್ತು ಮಕ್ಕಳು, ದಾವಣಗೆರೆ.

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

|| ಶ್ರೀ ಗುರು ತಿಪ್ಪೇರುದ್ರಸ್ವಾಮಿ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಶ್ರೀ ಬೇತೂರು ಪ್ರಭು (ಪ್ರಭಣ್ಣ)
ದಾವಣಗೆರೆಯ ಬೇತೂರು ಟ್ರೇಡರ್ಸ್ ಮತ್ತು
ಬೇತೂರು ರೈಸ್ ಮಿಲ್ ಮಾಲೀಕರು

ದಾವಣಗೆರೆ #2884/491, ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, 3ನೇ ಮೇನ್, 1ನೇ ಅಡ್ಡ ರಸ್ತೆ ವಾಸಿ
ಶ್ರೀಮತಿ ವಿಮಲಾಕ್ಷಮ್ಮ ಬಿ.ಪ್ರಭು ಮಕ್ಕಳು
ಇವರು ಮಾಡುವ ಶರಣಾರ್ಥಿಗಳು.
ದಿನಾಂಕ 20.10.2023ನೇ ಶುಕ್ರವಾರ, ಬೆಳಿಗ್ಗೆ 1.22ಕ್ಕೆ
ನನ್ನ ಪೂಜ್ಯ ಪತಿಯವರಾದ
ಶ್ರೀ ಬೇತೂರು ಪ್ರಭು (ಪ್ರಭಣ್ಣ)
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 01.11.2023ನೇ ಬುಧವಾರ ಬೆಳಿಗ್ಗೆ 11.45 ಗಂಟೆಗೆ
ಡಾ. ಸದ್ಯೋಜ್ಯಾತ ಶಿವಾಚಾರ್ಯ ಮಹಾಸ್ವಾಮೀಜಿ ಹಿರೇಮಠ, ಎಂ.ಸಿ.ಸಿ. ಬಿ ಬ್ಲಾಕ್, ಶಾಮನೂರು ರಸ್ತೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ : ಶ್ರೀಮತಿ ವಿಮಲಾಕ್ಷಮ್ಮ ಬಿ.ಪ್ರಭು
ಶ್ರೀಮತಿ ತಿಪ್ಪಮ್ಮ ಮತ್ತು ಶ್ರೀ ಮಹಾಬಲೇಶ್ವರ ಅಂಗಡಿ, ಬೆಂಗಳೂರು
ಶ್ರೀಮತಿ ಉಮಾ ಮತ್ತು ಶ್ರೀ ಮುರುಗೇಶ ಬಿ.ಪಿ.
ಶ್ರೀಮತಿ ವಿದ್ಯಾ ಮತ್ತು ಶ್ರೀ ರುದ್ರೇಶ ಬಿ.ಪಿ. ಹಾಗೂ ಮೊಮ್ಮಕ್ಕಳು
ಬಂಧು ಮಿತ್ರರು. ಮೊ : 99640 89189, 98455 39981




Venue
Eden Gardens, #2965/2-3, 6th Main, MCC B Block, Near Swimming Pool, Davangere

F15, The Collections at UB City, 24, Vittal Mallya Road, Bangalore - 560 001. Karnataka (India)
Phone: 080 41502727 | website: www.diani.in | E-mail: bangalore@diani.in







Preethi Aaraike Trust

Aaraike Hospitals

## ನಾಡಿನ ಸಮಸ್ತ ಜನತೆಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

## ಪ್ರೀತಿ ಆರೈಕೆ ಟ್ರಸ್ಟ್, ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ಸಹಯೋಗದಲ್ಲಿ

## ಪ್ರೀತಿ-ಆರೈಕೆ ಆರೋಗ್ಯ ದಾಸೋಹ

31+
ಜಿಲ್ಲಾದ್ಯಂತ ಆರೋಗ್ಯ ಉಚಿತ ಶಿಬಿರಗಳು

13145
ಸಾರ್ವಜನಿಕರಿಗೆ ಆರೋಗ್ಯ ತಪಾಸಣೆ

ಧನ್ಯವಾದ ದಾವಣಗೆರೆ... ನಿಮ್ಮ ಪ್ರೀತಿ, ಅಭಿಮಾನಕ್ಕೆ ನಮ್ಮ ಶರಣು






ಡಾ. ರವಿಕುಮಾರ್ ಟಿ.ಜಿ.
ಸದಸ್ಯರು, ರಾಜ್ಯ ಬಿಜೆಪಿ ವೈದ್ಯಕೀಯ ಪ್ರಕೋಷ್ಠ
ಮುಖ್ಯಸ್ಥರು, ಆರೈಕೆ ಸೂಪರ್ ಸ್ಪೆಷಾಲಟಿ ಆಸ್ಪತ್ರೆ
ಕಾರ್ಯದರ್ಶಿ, ಪ್ರೀತಿ ಆರೈಕೆ ಟ್ರಸ್ಟ್, ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ: 20.10.2023 ರಂದು ನಿಧನರಾದ ಬೇತೂರು ಟ್ರೇಡರ್ಸ್ ಮತ್ತು ಬೇತೂರು ಇಂಡಸ್ಟ್ರೀಸ್ ಮಾಲೀಕರು, ನಮ್ಮ ಸಂಘದ ಟ್ರಸ್ಟಿಗಳೂ ಆಗಿದ್ದ



ಬೇತೂರು ಪ್ರಭಣ್ಣ
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ...

ಶ್ರೀ ವಿನಾಯಕ ದೇವಸ್ಥಾನದ ಸೇವಾ ಸಂಘ ಟ್ರಸ್ಟ್ (ರಿ.)
ದೊಡ್ಡಪೇಟೆ, ದಾವಣಗೆರೆ.

# 79 ಸಂವತ್ಸರ ಕಳೆದು 80ಕ್ಕೆ ಪಾದಾರ್ಪಣೆ

## ರಾಣೇಬೆನ್ನೂರಿನಲ್ಲಿ ಇಂದು ವಿಧಾನಸಭೆಯ ಮಾಜಿ ಅಧ್ಯಕ್ಷ ಕೋಳಿವಾಡ ಜನ್ಮದಿನಾಚರಣೆ



79 ಸಂವತ್ಸರಗಳನ್ನು ಪೂರ್ಣ ಗೊಳಿಸಿ, 80 ಕ್ಕೆ ಪಾದಾರ್ಪಣೆ ಮಾಡುತ್ತಿರುವ ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಬಿ. ಕೋಳಿವಾಡ ಅವರ ಜನ್ಮದಿನವನ್ನು ನವೆಂಬರ್ 1 ರಂದು ಅವರ ಅಭಿಮಾನಿಗಳು ಹಾಗೂ ಅವರ ಮಗ ಶಾಸಕ ಪ್ರಕಾಶ್ ನೇತೃತ್ವದ ಪಿಕೆಕೆ ಸಂಸ್ಥೆ ಜೊತೆಯಾಗಿ ವಿವಿಧ ಜನಪರ ಕಾರ್ಯಕ್ರಮಗಳೊಂದಿಗೆ ಎಪಿ ಎಂಸಿ ಸಮುದಾಯ ಭವನದಲ್ಲಿ ಆಚರಿಸಲಿದ್ದಾರೆ.

ಬಾನೆತ್ತರದಲ್ಲಿ ಸ್ವಚ್ಛಂದವಾಗಿ ಹಾರುತ್ತಿದ್ದ ಪಾರಿವಾಳ ಗಳನ್ನು ಸಾಕಿ, ಸಲುಹುತ್ತಾ ಅವುಗಳ ಒಡನಾಡಿಯಾಗಿದ್ದ ಪುಟ್ಟ ಗ್ರಾಮ ಗುಡಗೂರಿನ ಪುಟ್ಟ ಹುಡುಗ ಕೃಷ್ಣಪ್ಪನೇ, ಸಂವಿಧಾನದ ಉನ್ನತ ಸ್ಥಾನ ಕರ್ನಾಟಕ ವಿಧಾನಸಭಾ ಅಧ್ಯಕ್ಷ ಪೀಠವನ್ನಲಂಕರಿಸಿದ ಕೆ.ಬಿ. ಕೋಳಿವಾಡರು.

ಹೇಮರಡ್ಡಿ ಮಲ್ಲಮ್ಮನ ಕೃಪಾ ಕಟಾಕ್ಷದ ಶ್ರೀಮಂತ ರಡ್ಡಿ ಸಮಾಜದ ಅವಿಭಕ್ತ ಕುಟುಂಬದ ವೆಂಕಪ್ಪನವರ ಮಗನಾಗಿ ದಿ.1.11.1944 ರಂದು ಬಾಯಲ್ಲಿ ಬಂಗಾರದ ಚಮಚವನ್ನೇ ಇಟ್ಟುಕೊಂಡು ಹುಟ್ಟಿದ ಕೃಷ್ಣಪ್ಪ ಕೋಳಿವಾಡರು, ಅದೇ ಕುಟುಂಬದ ಇನ್ನೊಬ್ಬ ಸಿರಿವಂತ, ನೂರಾರು ಎಕರೆ ಜಮೀನಿನ ಒಡೆಯ ಭೀಮಪ್ಪನವರಿಗೆ ದತ್ತು ಪುತ್ರರಾಗುತ್ತಾರೆ.

ಇದ್ದೊಬ್ಬ ಮಗ ಮನೆಯಲ್ಲಿಯೇ ಇದ್ದು ಇರುವ ಸಿರಿತನವನ್ನು ಉಳಿಸಿ, ಬೆಳೆಸಿಕೊಳ್ಳುವಷ್ಟು ಅಕ್ಷರ ಜ್ಞಾನ ಸಾಕು ಎನ್ನುವ ಹಿರಿಯರ ಆಸೆಯನ್ನು ಬದಿಗಿರಿಸಿ, ಸೋದರ ಮಾವ ಒಡೆಯರಹಳ್ಳಿ ವಕೀಲರ ಪ್ರೋತ್ಸಾಹದೊಂದಿಗೆ ಕಾಲೇಜು ಮೆಟ್ಟಿಲೇರಿ, ಧಾರವಾಡ ಕರ್ನಾಟಕ ವಿಶ್ವ ವಿದ್ಯಾಲಯದಲ್ಲಿ ಬಂಗಾರ ಪದಕದ ಜೊತೆ ಪದವಿ ಪಡೆಯುತ್ತಾರೆ. ಕಾನೂನು ಪದವಿ ಪಡೆದರೂ ಸಹ ವಕೀಲಿ ವೃತ್ತಿ ಮಾಡಲು ಒಪ್ಪದ ಹಿರಿಯರ ಮಾತುಗಳನ್ನು ನಿರಾಕರಿಸಿ, ರಾಣೇಬೆನ್ನೂರಿನ ನ್ಯಾಯಾಲಯದಲ್ಲಿ ಖ್ಯಾತನಾಮರಾಗಿದ್ದ ನೇಕಾರ ಸಮಾಜದ ಎಂ. ಎಂ. ಬೆನ್ನೂರ ವಕೀಲರ ಬಳಿ ಕಿರಿಯ ವಕೀಲರಾಗಿ ಸೇರಿ ಅವರ ಮಾರ್ಗ ದರ್ಶನದಲ್ಲಿ ಸಾಕಷ್ಟು ಪರಿಣಿತಿ ಪಡೆಯುತ್ತಾರೆ.

ತಂದೆ ವೆಂಕಟಪ್ಪ ಮಾಡುತ್ತಿದ್ದ ನ್ಯಾಯ ಪಂಚಾಯಿತಿ ಹಾಗೂ ಹುಲುಕೋಟಿಯ ಹುಲಿ ಎಂದು ಪ್ರಚಲಿತರಾಗಿದ್ದ ಬಂಧುಗಳಾದ ಗದಗಿನ ಕೆ.ಹೆಚ್. ಪಾಟೀಲರ ಪ್ರೋತ್ಸಾಹದೊಂದಿಗೆ ಎಪಿ ಎಂಸಿ ನಿರ್ದೇಶಕರಾಗಿ ರಾಜಕೀಯ ಪ್ರವೇಶಿಸಿ, 1972 ರಲ್ಲಿ ನಡೆದ ತಮ್ಮ ಮೊದಲ ಅಸೆಂಬ್ಲಿ ಚುನಾವಣೆಯಲ್ಲಿಯೇ ಜಯ ಗಳಿಸಿ, ವಿಧಾನಸಭೆ ಪ್ರವೇಶಿಸಿದ ಕೋಳಿವಾಡರು, ಅಂದಿನ ಆ ಮನೆಯ ಅತ್ಯಂತ ಕಿರಿಯ ಸದಸ್ಯರಾಗುತ್ತಾರೆ.

ಕಾಂಗ್ರೆಸ್ ಪಕ್ಷದ ನಿಷ್ಠಾವಂತರಾದ ಕೋಳಿವಾಡರು 11 ಚುನಾವಣೆ ಗಳನ್ನು ಎದುರಿಸಿ ಸೋಲು-ಗೆಲುವು ಗಳನ್ನು ಸಮನಾಗಿ ಸ್ವೀಕರಿಸಿದರು. ಕ್ಷೇತ್ರದಲ್ಲಿ ತಮ್ಮ ಸಮಾಜದ ಅತ್ಯಂತ ಕಡಿಮೆ ಮತದಾರರನ್ನು ಪ್ರತಿನಿಧಿಸಿದರೂ, ಸಹ, ಅಂದಿನ ಜಾತಿ ಹಾಗೂ ಹಣ ರಹಿತ ಆರೋಗ್ಯ ಕರ ವಾತಾವರಣವನ್ನು ಸದುಪಯೋಗಪಡಿಸಿ ಕೊಂಡು, ಪಕ್ಷದ ಸಂಘಟನೆ ಜೊತೆಗೆ ತಮ್ಮದೇ ಆದ ಬೆಂಗಾವಲು ಪಡೆಯನ್ನು ಬಲವಾಗಿಸಿಕೊಂಡ ನುರಿತ, ಚಾಣಾಕ್ಷ ರಾಜಕಾರಣಿಯಾಗಿ ಬೆಳೆದರು. ಬಣ್ಣದ ಗೀಳು... ತಂದೆ ವೆಂಕಪ್ಪನವರಿಂದ ರಕ್ತಗತವಾಗಿ ಬಂದ ನಾಟಕದ ಗೀಳು ಇವರಿಗೂ ಬಣ್ಣ ಹಚ್ಚಿಸಿತ್ತು. ರಕ್ತರಾತ್ರಿ, ಕುರುಕ್ಷೇತ್ರ ಮತ್ತು ಸಂಸಾರ ನಾಟಕಗಳಲ್ಲಿ ಅಭಿನಯಿಸಿದ ಕೋಳಿವಾಡರು, ಹೆಣ್ಣಿನ ಪಾತ್ರ ದಿಂದ ಮಾವ ಒಡೇರಹಳ್ಳಿ ವಕೀಲರ ಶಹಬ್ಬಾಸಗಿರಿ ಪಡೆದವರು.

**ಒಂದು ರಾಜಕೀಯ ಘಟನೆ:** ಪ್ರಥಮ ಅಂದರೆ 1972 ರ ವಿದಾನಸಭೆ ಚುನಾವಣೆ ಸಂದರ್ಭದಲ್ಲಿ ದೆಹಲಿಗೆ ತೆರಳಿ ಇಂದಿರಾಗಾಂಧಿ ಅವರಿಂದ ಕಾಂಗ್ರೆಸ್ ಟಿಕೆಟ್ ತಂದು ತಮಗೆ ಆತ್ಮೀಯರಾಗಿದ್ದ ಹಲಗೇರಿಯ ಡಾ: ಬಿ.ಜಿ.ಪಾಟೀಲ (83 ರಲ್ಲಿ ಶಾಸಕರು, 85 ರಲ್ಲಿ ಧಾರವಾಡ ಜಿಲ್ಲಾ ಪರಿಷತ್ ಅಧ್ಯಕ್ಷರು)ರೊಡನೆ ಚರ್ಚಿಸಿ ಬೆಳಿಗ್ಗೆ ನಾಮಪತ್ರ ಸಲ್ಲಿಸಲು ತಹಶೀಲ್ದಾರ್ ಕಛೇರಿಗೆ ತೆರಳಿದ ಕೋಳಿವಾಡರ ವಿರುದ್ದ ಕೆಲ ಮುಖಂಡರು ಸೇರಿ, ಅದೇ ಬಿ.ಜಿ.ಪಾಟೀಲರನ್ನು ಪ್ರತಿಸ್ಪರ್ಧಿಯನ್ನಾಗಿಸಿದ್ದರು. ದೃತಿಗೆಡದ ಕೋಳಿ ವಾಡರು ಏಕಾಂಗಿಯಾಗಿ ಚುನಾವಣೆ ಎದುರಿಸಿ ಮೊದಲ ಇನ್ನಿಂಗ್ಸ್ ನಲ್ಲಿಯೇ ಜಯ ಗಳಿಸುತ್ತಾರೆ. 5 ದಶಕಗಳ ಕಾಲ ತಮ್ಮ ರಾಜಕೀಯ ಪಯಣದಲ್ಲಿ ಈ ಬಾರಿ ಚುನಾವಣೆಯಿಂದ ದೂರ ಉಳಿದಿದ್ದು ಬೆಂಗಾವಲು ಪಡೆಯ ಸನಿಹದಲ್ಲಿದ್ದಾರೆ.

**- ಮನೋಹರ ಮಲ್ಲಾಡದ**

## 'ಕಣಕಣದಲ್ಲೂ ಕನ್ನಡ' ಆಲ್ಬಂ ಸಾಂಗ್ ಇಂದು ಬಿಡುಗಡೆ

ದಾವಣಗೆರೆ, ಅ. 31- ದಾವಣಗೆರೆ ಯುವ ಪ್ರತಿಭೆಗಳು ನಟಿಸಿ, ನಿರ್ದೇಶಿಸಿರುವ ಕಣಕಣದಲ್ಲೂ ಕನ್ನಡ ಯೂಟ್ಯೂಬ್ ಆಲ್ಬಂ ಸಾಂಗ್ ನಾಳೆ ದಿನಾಂಕ 1ರ ಬುಧವಾರ ಬಿಡುಗಡೆಯಾಗಲಿದೆ ಎಂದು ಸಂಗೀತ ಶಿಕ್ಷಕ ಚೇತನ್ ಕುಮಾರ್ ಜೆ. ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ನಾಮಕರಣವಾಗಿ 50 ವರ್ಷವಾದ ಹಿನ್ನೆಲೆಯಲ್ಲಿ ಈ ಹಾಡು ನಿರ್ಮಿಸಲಾಗಿದೆ. ಆನಗೋಡು ಹಾಗೂ ದಾವಣಗೆರೆ ಸುತ್ತ ಮುತ್ತ 3 ದಿನ ಚಿತ್ರೀಕರಣ ನಡೆಸಲಾಗಿದೆ. ಶೆಟ್ರು ವೀರಭದ್ರ ಕೋಗಳಿ ಹಾಡು ಬರೆದಿದ್ದಾರೆ. ಎಲ್. ಉಜ್ವಲ್ ನಿರ್ದೇಶಿಸಿದ್ದಾರೆ ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಎಲ್. ಉಜ್ವಲ್ ಕುಮಾರ್, ಹೆಚ್.ಆರ್. ಬಸವರಾಜ್ ಇದ್ದರು.

# ಬರ ನಿರ್ವಹಣೆಗೆ ಖಾಸಗಿ ಬೋರ್ ಸಜ್ಜಾಗಿರಲಿ

## ಬೆಳೆ ವಿಮೆ ಪರಿಹಾರ ಎಲ್ಲ ರೈತರಿಗೂ ಸಿಗಲಿ : ದಿಶಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ




ದಾವಣಗೆರೆ, ಅ. 31 - ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಅಗತ್ಯಕ್ಕಾಗಿ ಖಾಸಗಿ ಬೋರ್‌ಗಳನ್ನೂ ಸಜ್ಜಾಗಿರಿಸಬೇಕು. ಬೆಳೆ ವಿಮೆ ಮಾಡಿಸಿಕೊಂಡ ಎಲ್ಲ ರೈತರಿಗೂ ಪರಿಹಾರ ಸಿಗಬೇಕು ಎಂದು ಜಿಲ್ಲಾ ಪಂಚಾಯ್ತಿ ಆವರಣದಲ್ಲಿ ನಡೆದ ದಾವಣಗೆರೆ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಸೂಳೆಕೆರೆಯಲ್ಲಿ ಈಗಾಗಲೇ ನೀರು ಕಡಿಮೆಯಾಗಿದೆ. ಈ ಕೆರೆಯಿಂದ 80 ಗ್ರಾಮಗಳಿಗಷ್ಟೇ ಅಲ್ಲದೇ ಚಿತ್ರದುರ್ಗ, ಜಗಳೂರು, ಹೊಳಲ್ಕೆರೆಗಳಿಗೂ ನೀರು ಪೂರೈಕೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ನೀರು ಸಮರ್ಪಕವಾಗಿರುವಂತೆ ನೋಡಿಕೊಳ್ಳಿ ಎಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಸದ ಜಿ.ಎಂ. ಸಿದ್ದೇಶ್ವರ ಸೂಚನೆ ನೀಡಿದರು.

ಬೇಸಿಗೆಯ ಒಳಗೆ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಬೇಸಿಗೆಯಲ್ಲಿ ನೀರಿನ ಸಮಸ್ಯೆಯಾದರೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೇ ಜನರನ್ನು ಎದುರಿಸಬೇಕಾಗುತ್ತದೆ ಎಂದು ಸಿದ್ದೇಶ್ವರ ಹೇಳಿದರು.

155 ಗ್ರಾಮಗಳಲ್ಲಿ ನೀರಿನ ಸಮಸ್ಯೆ ತಲೆದೋರುವ ಸಾಧ್ಯತೆ ಇದೆ. ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಅಗತ್ಯವಿರುವ ಕಡೆಗಳಲ್ಲಿ ಖಾಸಗಿ ಬೋರ್‌ಗಳನ್ನೂ ಸಿದ್ಧವಾಗಿಟ್ಟುಕೊಳ್ಳಬೇಕು. ಈ ಬಗ್ಗೆ ತಹಶೀಲ್ದಾರ್ ಹಾಗೂ ಪಿ.ಡಿ.ಒ.ಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು.

ಜಿಲ್ಲೆಯಲ್ಲಿ 47,247 ರೈತರು ಫಸಲು ವಿಮೆ ಪಡೆದಿದ್ದಾರೆ. ಜಿಲ್ಲೆಯ ಎಲ್ಲ ರೈತರೂ ನಷ್ಟಕ್ಕೆ ಗುರಿಯಾಗಿದ್ದಾರೆ. ವಿಮೆ ಪಡೆದ ಎಲ್ಲರಿಗೂ ಪರಿಹಾರ ಸಿಗಬೇಕು. ವಿಮಾ ಕಂಪನಿಗಳ ಜೊತೆ ಅಧಿಕಾರಿಗಳು ಶಾಮೀಲಾಗಿ ತಪ್ಪು ವರದಿ ನೀಡುವಂತಾಗಬಾರದು ಎಂದು ಸಂಸದ ಸಿದ್ದೇಶ್ವರ ಇದೇ ಸಂದರ್ಭದಲ್ಲಿ ಎಚ್ಚರಿಕೆ ನೀಡಿದರು.

ಈ ಬಗ್ಗೆ ಸಭೆಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ ವೆಂಕಟೇಶ್, 99 ಗ್ರಾಮಗಳಲ್ಲಿ ಬೆಳೆ ಸಮೀಕ್ಷೆ ನಡೆಲಾಗಿದೆ. ಶೇ.97.5ರಷ್ಟು ಪ್ರದೇಶದಲ್ಲಿ ಶೇ.50ಕ್ಕೂ ಹೆಚ್ಚು ಬೆಳೆ ನಾಶವಾಗಿದೆ. ಶೇ.85ರಷ್ಟು ಪ್ರದೇಶದಲ್ಲಿ ಶೇ.90ಕ್ಕೂ ಹೆಚ್ಚು ನಷ್ಟವಾಗಿದೆ. ಈ ಬಾರಿ ಆದಷ್ಟು ಬೇಗ ಪರಿಹಾರ ಬಿಡುಗಡೆ ಮಾಡಲು ಕೋರಲಾಗಿದೆ ಎಂದರು.

ಪ್ರಧಾನ ಮಂತ್ರಿ ನಗರ ವಸತಿ ಯೋಜನೆಯಡಿ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ 996 ವಸತಿ ರಹಿತರಿಗೆ ಪಾಲಿಕೆಯಿಂದ ನಿವೇಶನ ಹಾಗೂ ಹಕ್ಕುಪತ್ರ ವಿತರಣೆ ವಿಳಂಬವಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸಂಸದ ಸಿದ್ದೇಶ್ವರ, ವಾರದಲ್ಲೇ ಈ ಬಗ್ಗೆ ವರದಿ ನೀಡಬೇಕು ಎಂದು ತಾಕೀತು ಮಾಡಿದರು.

ಪ್ರಧಾನ ಮಂತ್ರಿ ಗ್ರಾಮೀಣ ವಸತಿ ಯೋಜನೆಯಡಿ ಫಲಾನುಭವಿಗಳಿಗೆ ನೀಡಲಾಗುವ ಹಣದ ಕಂತುಗಳನ್ನು ಕಡಿಮೆ ಮಾಡಿರುವ ಬಗ್ಗೆ ಸಂಸದರು ಅಸಮಾಧಾನ ವ್ಯಕ್ತಪಡಿಸಿದ್ದು, ಈ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯುವುದಾಗಿ ಹೇಳಿದರು.

ಈ ಹಿಂದೆ ಫಲಾನುಭವಿಗಳಿಗೆ ಸಬ್ಸಿಡಿಯನ್ನು ನಾಲ್ಕು ಕಂತುಗಳಲ್ಲಿ ಹಣ ನೀಡಲಾಗುತ್ತಿತ್ತು. ಈಗ ಮೂರಕ್ಕೆ ಇಳಿಸಲಾಗಿದೆ. ಅದರಲ್ಲೂ 2-3 ಕಂತಿನ ಹಣವನ್ನು ಒಂದೇ ಬಾರಿಗೆ ನೀಡಲಾಗುತ್ತಿದೆ ಎಂದು ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಇಟ್ನಾಳ್ ತಿಳಿಸಿದರು.

ಸಭೆಯಲ್ಲಿ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ, ಹಾಗೂ ದಿಶಾ ಸಮಿತಿ ಸದಸ್ಯರು ಮತ್ತು ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

### ಬೆಳ್ಳುಳ್ಳಿ ಸುಲಿಯಲೊಂದು ಘಟಕ

ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಜಿಲ್ಲೆಯ 85 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಇವರಿಗೆ 267.10 ಲಕ್ಷ ರೂ.ಗಳ ಸಹಾಯಧನ ಮಂಜೂರಾಗಿದೆ. ಇದರಲ್ಲಿ 32 ಲಕ್ಷ ರೂ. ವೆಚ್ಚದಲ್ಲಿ ಬೆಳ್ಳುಳ್ಳಿ ಸುಲಿಯುವ ಘಟಕ ಸಹ ಸೇರಿದೆ.

ಈ ಬಗ್ಗೆ ಸಭೆಗೆ ಮಾಹಿತಿ ನೀಡಿದ ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ ಚಿಂತಾಲ್, ಈ ಘಟಕದ ಮೂಲಕ ಬೆಳ್ಳುಳ್ಳಿ ಸುಲಿದು ಪೊಟ್ಟಣಗಳಲ್ಲಿ ತುಂಬಿ ಮಾರಲಾಗುವುದು. ಮಹಿಳೆಯರು ಬೆಳ್ಳುಳ್ಳಿ ಸುಲಿಯುವ ಕಷ್ಟ ತಪ್ಪಿಸಲು ಈ ಘಟಕದವರು ಯೋಜಿಸಿದ್ದಾರೆ ಎಂದರು.

### ಮಜಾ ಮಾಡಿಕೊಂಡಿರಲಿ ಬಿಡಿ

ಪ್ರಧಾನ ಮಂತ್ರಿ ಗ್ರಾಮೀಣ ವಸತಿ ಯೋಜನೆಯಡಿ ಮೊದಲ ಕಂತಿನ ಸಬ್ಸಿಡಿ ಪಡೆದುಕೊಂಡ ಸಾಕಷ್ಟು ಜನ ಇನ್ನೂ ಮನೆ ನಿರ್ಮಾಣ ಪೂರ್ಣಗೊಳಿಸಿಲ್ಲ. ಇವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಇದಕ್ಕೆ ಸಮ್ಮತಿಸದ ಸಂಸದ ಜಿ.ಎಂ. ಸಿದ್ದೇಶ್ವರ, ಜನರ ಮೇಲೆ ಬಲವಂತದ ಕ್ರಮ ಬೇಡ. ಮನೆ ಪೂರ್ಣಗೊಳಿಸಲು ಜನರ ಮನವೊಲಿಸಿ. ಸಬ್ಸಿಡಿ ಹಣ ಪಡೆದೂ ಮನೆ ಪೂರ್ಣಗೊಳಿಸಿಲ್ಲ ಎಂದರೆ, ಮಜಾ ಮಾಡಿಕೊಂಡಿರಲಿ ಬಿಡಿ ಎಂದರು.

### ಗ್ರಾಮಕ್ಕೆ ನೀರು, ಪುರಸಭೆಗೆ ಗುಂಡಿ

ಹೊನ್ನಾಳಿ ತಾಲ್ಲೂಕಿನ ಹಿರೇಮಠದಲ್ಲಿ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿ ನೀರು ಪೂರೈಕೆಗೆ ಕಾಮಗಾರಿ ಕೈಗೊಳ್ಳಲಾಗಿತ್ತು. ಆದರೆ, ಗ್ರಾಮವು ಹೊನ್ನಾಳಿ ಪುರಸಭೆಗೆ ಸೇರಿದ ನಂತರ ಕಾಮಗಾರಿ ಕೈ ಬಿಡಲಾಗಿದೆ. ಕಾಮಗಾರಿಗಾಗಿ ಅಗೆಯಲಾಗಿದ್ದ ಗುಂಡಿಗಳನ್ನು ಹಾಗೇ ಬಿಡಲಾಗಿದೆ ಎಂದು ಸಭೆಗೆ ತಿಳಿಸಲಾಯಿತು.

ಕಾಮಗಾರಿ ಕೈಗೊಂಡ ನಂತರ ರಸ್ತೆಯನ್ನು ಮೊದಲಿದ್ದ ರೀತಿಗೆ ರಿಪೇರಿ ಮಾಡಿಕೊಡುವುದು ಗುತ್ತಿಗೆದಾರರ ಜವಾಬ್ದಾರಿ. ಈ ಬಗ್ಗೆ ಸಂಬಂಧಿಸಿದ ಗುತ್ತಿಗೆದಾರರಿಂದ ಕೆಲಸ ಮಾಡಿಸುವಂತೆ ಸಂಸದ ಜಿ.ಎಂ. ಸಿದ್ದೇಶ್ವರ ಸೂಚಿಸಿದರು.

### ಭದ್ರಾ ನೀರಿಗಾಗಿ ಸಂಸದರಿಗೆ ಬೆನ್ನು ಹತ್ತಿದ ರೈತರು

ಕಡಿಮೆ ನೀರಿನಲ್ಲಿ ಭತ್ತ ಬೆಳೆಯುವ ಬಗ್ಗೆ 4 ಸಾವಿರ ಹೆಕ್ಟೇರ್‌ನಲ್ಲಿ ಪ್ರಯೋಗ ಮಾಡಲಾಗಿದೆ. ಇದರಿಂದ ನೀರು ಉಳಿತಾಯವಾಗುವ ಜೊತೆಗೆ ಉತ್ತಮ ಬೆಳೆ ಬರುತ್ತಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ತಿಳಿಸಿದರು. ಆಗ ಪ್ರತಿಕ್ರಿಯಿಸಿದ ಸಂಸದ ಜಿ.ಎಂ. ಸಿದ್ದೇಶ್ವರ, ಹರಿಹರ ತಾಲ್ಲೂಕಿನ ಕಡಾರನಾಯಕನಹಳ್ಳಿ ಹಾಗೂ ಹೊಳೆಸಿರಿಗೆರೆ ರೈತರಿಗೆ ಮೊದಲು ಈ ವಿಧಾನದ ಬಗ್ಗೆ ತಿಳಿಸಿ. ಆ ಗ್ರಾಮಗಳ ಜನರು ಭದ್ರಾ ನೀರಿಗಾಗಿ ಹಗಲು-ರಾತ್ರಿ ಎನ್ನದೇ ನನಗೆ ಕರೆ ಮಾಡುತ್ತಿದ್ದಾರೆ. ನೀರಿನ ವಿಷಯ ಶಾಸಕರಿಗೆ ಸೇರಿದ್ದು, ಅವರನ್ನು ಸಂಪರ್ಕಿಸಿ ಎಂದರೂ ಕೇಳುತ್ತಿಲ್ಲ ಎಂದರು.

# ಯೋಧ ಶಿವಕುಮಾರ್ ಸ್ವಾಗತಕ್ಕೆ ಯಲವಟ್ಟಿ ಸಜ್ಜು



ಮಲೇಬೆನ್ನೂರು ಸಮೀಪದ ಯಲವಟ್ಟಿ ಗ್ರಾಮದ ದಿ. ಸಾವಿತ್ರಮ್ಮ ಮತ್ತು ದಿ. ಹಲಗೇರಿ ಕರಿಬಸಪ್ಪನವರ ಸುಪುತ್ರರಾದ ಹೆಚ್.ಶಿವಕುಮಾರ್ ಅವರು ಭಾರತೀಯ ಭೂ ಸೇನೆಯಲ್ಲಿ ಸುಧೀರ್ಘ 28 ವರ್ಷಗಳ ಕಾಲ ಸೇವೆ ಸಲ್ಲಿಸಿ, ಸೇವೆಯಿಂದ ನಿವೃತ್ತರಾಗಿ ಇಂದು ತಯ್ನಾಡಿಗೆ ಆಗಮಿಸುತ್ತಿದ್ದು, ಅವರನ್ನು ಸ್ವಾಗತಿಸಲು ಯಲವಟ್ಟಿ ಗ್ರಾಮ ನವ ವಧುವಿನಂತೆ ಸಿಂಗಾರಗೊಂಡಿದೆ.

ರೈಲು ಮೂಲಕ ಬೆಳಿಗ್ಗೆ 10 ಗಂಟೆಗೆ ಹರಿಹರಕ್ಕೆ ಆಗಮಿಸುವ ಸುಭೇದಾರ್ ಶಿವಕುಮಾರ್ ಅವರನ್ನು ಅಲ್ಲಿಂದಲೇ ತೆರೆದ ವಾಹನದಲ್ಲಿ ಯಲವಟ್ಟಿ ಗ್ರಾಮಕ್ಕೆ ಕರೆ ತರುವ ವ್ಯವಸ್ಥೆ ಯುವಕರು ಮಾಡಿದ್ದಾರೆ. ಮಧ್ಯಾಹ್ನ 12 ಗಂಟೆ ಸುಮಾರಿಗೆ ಯಲವಟ್ಟಿ ಪ್ರವೇಶಿಸುವ ಶಿವಕುಮಾರ್ ಅವರನ್ನು ಪೂರ್ಣಕುಂಭ ಮೇಳ ಹಾಗೂ ವಿವಿಧ ಕಲಾ-ಮೇಳಗಳೊಂದಿಗೆ ಸ್ವಾಗತಿಸಿ, ಗ್ರಾಮದಲ್ಲಿ ಮೆರವಣಿಗೆ ಮಾಡಲಿದ್ದಾರೆ.

ನಂತರ ಮಧ್ಯಾಹ್ನ 1.30ಕ್ಕೆ ಯಲವಟ್ಟಿಯ ಶ್ರೀ ಗುರು ಸಿದ್ಧಾಶ್ರಮದಲ್ಲಿ ಶ್ರೀ ಯೋಗಾನಂದ ಶ್ರೀಗಳವರ ಸಾನ್ನಿಧ್ಯದಲ್ಲಿ ಶಿವಕುಮಾರ್ ಅವರನ್ನು ಗ್ರಾಮಸ್ಥರು ಸನ್ಮಾನಿಸಿ, ಅಭಿನಂದಿಸಿದ್ದಾರೆ.

**ಪರಿಚಯ :** ಸುಬೇದಾರ್ ಹೆಚ್. ಶಿವಕುಮಾರ್ ಅವರು 1975 ರಲ್ಲಿ ಹಲಗೇರಿ ಕರಿಬಸಪ್ಪ ಮತ್ತು ಸಾವಿತ್ರಮ್ಮನವರ ಸುಪುತ್ರರಾಗಿ ಜನಿಸಿ, ಪ್ರಾಥಮಿಕ ಶಿಕ್ಷಣವನ್ನು ಯಲವಟ್ಟಿಯ ಸರ್ಕಾರಿ ಶಾಲೆಯಲ್ಲಿ ಮತ್ತು ಮಲೇಬೆನ್ನೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಪ್ರೌಢ ಶಿಕ್ಷಣವನ್ನು ಪಡೆದಿದ್ದಾರೆ. ರಾಣೇಬೆನ್ನೂರಿನ ಆರ್.ಟಿ.ಇ.ಎಸ್ ಕಾಲೇಜಿನಲ್ಲಿ ಪಿಯುಸಿ ಹಾಗೂ ಪದವಿ ಶಿಕ್ಷಣ ಪಡೆದಿರುವ ಶಿವಕುಮಾರ್ ಅವರು ಬಿ.ಎಸ್ಸಿ ದ್ವಿತೀಯ ವರ್ಷದ ವ್ಯಾಸಾಂಗ ಮಾಡುತ್ತಿರುವಾಗಲೇ ದಾವಣಗೆರೆಯಲ್ಲಿ ನಡೆದ ಮಿಲಿಟರಿ ಆಯ್ಕೆ ಪರೀಕ್ಷೆಯಲ್ಲಿ ಭಾಗವಹಿಸಿ, ದೈಹಿಕ ಪರೀಕ್ಷೆಯಲ್ಲಿ ಪಾಸಾಗಿ, ಲಿಖಿತ ಪರೀಕ್ಷೆಯಲ್ಲಿ ಫೇಲ್ ಆಗುತ್ತಾರೆ.

ಸೇನೆ ಸೇರಲೇಬೇಕೆಂಬ ಛಲದಿಂದ ಎರಡನೇ ಪ್ರಯತ್ನದಲ್ಲಿ ಪಾಸಾಗಿ ಸಿಪಾಯಿ ಆಗಿ ನೇಮಕಾತಿ ಆಗಿ, ಬೆಳಗಾವಿಯಲ್ಲಿ ತರಬೇತಿ ಪೂರೈಸಿ, ಮೊದಲ ಸೇವೆಯನ್ನು ಸಿಕ್ಕಿಂನಲ್ಲಿ ಆರಂಭಿಸುತ್ತಾರೆ. ನಂತರ ಜೈಪುರ, ಜಮ್ಮು-ಕಾಶ್ಮೀರ, ಅಂಡಮಾನ್ - ನಿಕೋಬಾರ್, ದೆಹಲಿ, ಅರುಣಾಚಲ ಪ್ರದೇಶ, ಲೇಲಡಾಕ್ ಗಲ್ವಾನ್ ಮತ್ತು ಗುಜರಾತಿನ ಜಾಮ್‌ನಗರದಲ್ಲಿ ಸೇವೆ ಸಲ್ಲಿಸಿರುತ್ತಾರೆ.

ಶಿವಕುಮಾರ್ 2004ರಲ್ಲಿ ಹನಗವಾಡಿಯ ಶ್ವೇತಾ ಅವರನ್ನು ವಿವಾಹವಾಗಿರುತ್ತಾರೆ.

## ನಗರದಲ್ಲಿ ಇಂದಿನ ಬ್ಯಾಂಕ್ ನೌಕರರ ಸಭೆ

ಅಖಿಲ ಭಾರತ ಬ್ಯಾಂಕ್ ನೌಕರರ ಸಂಘವು (ಎಐಬಿಇಎ) ಬ್ಯಾಂಕ್‌ಗಳಲ್ಲಿ ಅಗತ್ಯವಿರುವ ನೇಮಕಾತಿಗೆ ಒತ್ತಾಯಿಸಿ, ಎಲ್ಲಾ ಬ್ಯಾಂಕ್ ಉದ್ಯೋಗಿಗಳಿಗೆ ಹಳೆಯ ಪಿಂಚಣಿ ಯೋಜನೆಯನ್ನು ಮರು-ಅನುಷ್ಠಾನಗೊಳಿಸಲು ಒತ್ತಾಯಿಸಿ ಮತ್ತು ಬ್ಯಾಂಕ್ ಉದ್ಯೋಗಗಳ ಹೊರಗುತ್ತಿಗೆ ನೀಡುವುದನ್ನು ವಿರೋಧಿಸಿ ಸೆಪ್ಟೆಂಬರ್ 2023 ರಿಂದ ಜನವರಿ 2024 ರವರೆಗೆ ಸುದೀರ್ಘ ಅವಧಿಯ ಹೋರಾಟವನ್ನು ಹಮ್ಮಿಕೊಂಡಿದೆ ಎಂದು ದಾವಣಗೆರೆ ಜಿಲ್ಲಾ ಬ್ಯಾಂಕ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ರಾಘವೇಂದ್ರ ನಾಯರಿ ತಿಳಿಸಿದ್ದಾರೆ. ಈ ಹೋರಾಟದ ಭಾಗವಾಗಿ ಕರ್ನಾಟಕ ಪ್ರದೇಶ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್ ಜಿಲ್ಲಾವಾರು ಸದಸ್ಯರ ಸಭೆಯನ್ನು ಆಯೋಜಿಸಲು ಕರೆ ನೀಡಿದ್ದು, ಇಂದು ಬೆಳಿಗ್ಗೆ 10.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಸದಸ್ಯರ ಸಭೆ ನಡೆಯಲಿದೆ. ಮುಖ್ಯ ಭಾಷಣಕಾರರಾಗಿ ಕರ್ನಾಟಕ ಪ್ರದೇಶ ಬ್ಯಾಂಕ್ ಎಂಪ್ಲಾಯೀಸ್ ಫೆಡರೇಶನ್‌ನ ಜಂಟಿ ಕಾರ್ಯದರ್ಶಿ ಸ್ಟೀಫನ್ ಜಯಚಂದ್ರ ಆಗಮಿಸುವರು.

## ಮಲೇಬೆನ್ನೂರಿನಲ್ಲಿ ಇಂದು ರಾಜ್ಯೋತ್ಸವ

ಪಟ್ಟಣದ ಪುರಸಭೆ ವತಿಯಿಂದ ಮುಖ್ಯ ವೃತ್ತದಲ್ಲಿ ಮತ್ತು ಕರವೇ ವತಿಯಿಂದ ಜಿಗಳಿ ವೃತ್ತದಲ್ಲಿ ಹಾಗೂ ನಾಡಕಚೇರಿ, ಪೊಲೀಸ್ ಠಾಣೆ, ನೀರಾವರಿ ಇಲಾಖೆ, ಬೆಸ್ಕಾಂ, ಸಮುದಾಯ ಆರೋಗ್ಯ ಕೇಂದ್ರ, ಲಯನ್ಸ್ ಕ್ಲಬ್ ಸೇರಿದಂತೆ ಎಲ್ಲಾ ಶಾಲಾ-ಕಾಲೇಜುಗಳಲ್ಲಿ 68ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಿದ್ದಾರೆ.

## ನಗರದಲ್ಲಿ ಇಂದು ನಿರುದ್ಯೋಗಿ ಕಲಾವಿದರಿಗೆ ಉದ್ಯೋಗ, ವಿಚಾರಗೋಷ್ಠಿ

ದಾವಣಗೆರೆ, ಅ.31- ಎ.ಐ.ಎಂ. ಅಕಾಡೆಮಿ ವತಯಿಂದ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಕರುನಾಡ ನಟರಾಜ ವಿಚಾರಗೋಷ್ಠಿ, ನಿರುದ್ಯೋಗಿ ಕಲಾವಿದರಿದೆ ಉದ್ಯೋಗಾವಕಾಶ ನೀಡುವ ಕಾರ್ಯಕ್ರಮವನ್ನು ಶಿರಮಗೊಂಡನಹಳ್ಳಿಯ ಸುಧಾ ವೀರೇಂದ್ರ ಪಾಟೀಲ್ ಸಮುದಾಯಭವನದಲ್ಲಿ ನಾಳೆ ದಿನಾಂಕ 1ರ ಬುಧಾರ ಹಮ್ಮಿಕೊಳ್ಳಲಾಗಿದೆ.

ಎ.ಐ.ಎಂ. ಅಕಾಡೆಮಿಯ ವ್ಯವಸ್ಥಾಪಕ ನಿರ್ದೇಶಕ ರಾಜ್ ಯಾಧವ್ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸುತ್ತಾ, ಅಂದು ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಕನ್ನಡ ಪರ ಸಂಘಟನೆಗಳ ಒಕ್ಕೂಟದ ವಕ್ತಾರ ರತನ್, ಕಲಾವಿದ ಡಿ. ಗಿರೀಶ್ ಆಗಮಿಸಲಿದ್ದಾರೆ. ಪ್ರವೇಶ ಉಚಿತವಾಗಿದೆ.


ಪತ್ರಿಕಾಗೋಷ್ಠಿಯಲ್ಲಿ ಅಕಾಡೆಮಿಯ ಸಿಇಒ ಕೆ. ಶಿವಕುಮಾರ್, ವೀರೇಶ್, ಶೃತಿ, ಮಹೇಶ್ ಇದ್ದರು.

### ತೋಳಹುಣಸೆ ಆಂಜನೇಯ ಮಿಲ್ ಬೆಳವನೂರು ನಾಗರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ತೋಳಹುಣಸೆ ಆಂಜನೇಯ ಮಿಲ್ ಬಡಾವಣೆ ವಾಸಿ ದಿ. ನಂಜುಂಡಪ್ಪ, ಕೆಂಚವೀರಮ್ಮ ಇವರ ಪುತ್ರ ಬೆಳವನೂರು ನಾಗರಾಜಪ್ಪ (48)ಅವರು ದಿನಾಂಕ 31-10-2023ರ ಮಂಗಳವಾರ ರಾತ್ರಿ 7 ಗಂಟೆಗೆ ನಿಧನರಾದರು. ಪತ್ನಿ, ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 01-11-2023ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ತೋಳಹುಣಸೆ ಮೃತರ ಜಮೀನಿನಲ್ಲಿ ನೆರವೇರಲಿದೆ.

### ಎಂ.ಎಸ್. ದಕ್ಷಿಣಮೂರ್ತಿ ನಿಧನ



ದಾವಣಗೆರೆ ವಿನೋಬನಗರ 3ನೇ ಮೇನ್, 10ನೇ ಕ್ರಾಸ್ ವಾಸಿ, ನಿವೃತ್ತ ಸೀನಿಯರ್ ಹೆಲ್ತ್ ಇನ್‌ಸ್ಪೆಕ್ಟರ್ ಎಂ.ಎಸ್. ದಕ್ಷಿಣಮೂರ್ತಿ (86) ಅವರು ದಿನಾಂಕ 31.10.2023ರ ಮಂಗಳವಾರ ಸಂಜೆ 5.30ಕ್ಕೆ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 1.11.2023ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಗ್ಲಾಸ್ ಹೌಸ್ ಹತ್ತಿರದಲ್ಲಿರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ಬಿ.ಕಲಪನಹಳ್ಳಿ ಕೆ.ಎಸ್.ಮಹದೇವಪ್ಪ ನಿಧನ



ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದ ವಾಸಿ ಕೆ.ಎಸ್. ಮಹದೇವಪ್ಪ (73) ಅವರು ದಿನಾಂಕ 31-10-2023ರ ಮಂಗಳವಾರ ರಾತ್ರಿ 8.45ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಸಹೋದರರು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 01-11-2023ರ ಬುಧವಾರ ಮಧ್ಯಾಹ್ನ 1 .30 ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಬಿ.ಕಲಪನಹಳ್ಳಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

# ರಾಜ್ಯದಲ್ಲಿ 68 ಸಾಧಕರು, 10 ಸಂಘ-ಸಂಸ್ಥೆ ಗಳಿಗೆ ಪ್ರಶಸ್ತಿ

**(5ನೇ ಪುಟದಿಂದ)** ಎ.ಜಿ. ಚಿದಂಬರ ರಾವ್ ಜಂಬೆ (ಶಿವಮೊಗ್ಗ), ಪಿ. ಗಂಗಾಧರ ಸ್ವಾಮಿ (ಮೈಸೂರು), ಹೆಚ್.ಬಿ.ಸರೋಜಮ್ಮ (ಧಾರವಾಡ), ತಯ್ಯಬ್‌ಖಾನ್ ಎಂ.ಇನಾಮದಾರ, ಡಾ.ವಿಶ್ವನಾಥ್ ವಂಶಾಕೃತ ಮಠ (ಬಾಗಲಕೋಟೆ), ಪಿ. ತಿಪ್ಪೇಸ್ವಾಮಿ (ಚಿತ್ರದುರ್ಗ).

ಸಂಗೀತ ಕ್ಷೇತ್ರ ಡಾ.ನಯನ ಎಸ್.ಮೋರೆ (ಬೆಂಗಳೂರು), ಲೀಲಾ ಎಂ ಕೊಡ್ಲಿ (ಧಾರವಾಡ), ಶಬ್ಬೀರ್ ಅಹಮದ್ (ಬೆಂಗಳೂರು), ಡಾ.ಎಸ್ ಬಾಳೇಶ ಭಜಂತ್ರಿ (ಬೆಳಗಾವಿ).

ಶಿಲ್ಪಕಲೆ ಮತ್ತು ಚಿತ್ರಕಲೆ ಕ್ಷೇತ್ರ ಟಿ.ಶಿವಶಂಕರ್ (ದಾವಣಗೆರೆ), ಕಾಳಪ್ಪ ವಿಶ್ವಕರ್ಮ (ರಾಯಚೂರು), ಮಾರ್ಥಾ ಜಾಕಿಮೋವಿಚ್ (ಬೆಂಗಳೂರು), ಪಿ.ಗೌರಯ್ಯ (ಮೈಸೂರು).

ಯಕ್ಷಗಾನ ಮತ್ತು ಬಯಲಾಟ ಕ್ಷೇತ್ರ ಅರ್ಗೋಡು ಮೋಹನದಾಸ ಶೆಣೈ (ಉಡುಪಿ), ಕೆ. ಲೀಲಾವತಿ ಬೈಪಾಡಿತ್ತಾಯ (ದ.ಕನ್ನಡ), ಕೇಶಪ್ಪ ಶಿಳ್ಳಿಕ್ಯಾತರ (ಕೊಪ್ಪಳ), ದಳವಾಯಿ ಸಿದ್ದಪ್ಪ (ವಿಜಯನಗರ).

ಜಾನಪದ ಕ್ಷೇತ್ರ ಹುಸೇನಾಬಿ ಬುಡೆನ್ ಸಾಬ್ ಸಿದ್ದಿ (ಉತ್ತರ ಕನ್ನಡ), ಶಿವಂಗಿ ಶಣ್ಮರಿ (ದಾವಣಗೆರೆ), ಮಹದೇವು (ಮೈಸೂರು), ನರಸಪ್ಪಾ (ಬೀದರ್), ಶಕುಂತಲಾ ದೇವಲಾನಾಯಕ (ಕಲಬುರಗಿ), ಎಚ್.ಕೆ ಕಾರಮಂಚಪ್ಪ (ಬಳ್ಳಾರಿ), ಡಾ.ಶಂಭು ಬಳಿಗಾರ (ಗದಗ), ವಿಭೂತಿ ಗುಂಡಪ್ಪ (ಕೊಪ್ಪಳ) ಚೌಡಮ್ಮ (ಚಿಕ್ಕಮಗಳೂರು).

ಕೃಷಿ-ಪರಿಸರ ಕ್ಷೇತ್ರದಲ್ಲಿ ಸೋಮನಾಥ ರೆಡ್ಡಿ ಪೂರ್ಮಾ (ಕಲಬುರಗಿ), ದ್ಯಾವನಗೌಡ ಪಿ. ಪಾಟೀಲ (ಧಾರವಾಡ), ಶಿವರೆಡ್ಡಿ ಹನುಮರೆಡ್ಡಿ ವಾಸನ (ಬಾಗಲಕೋಟೆ).

ಸಂಕೀರ್ಣ ಕ್ಷೇತ್ರ: ಎ.ಎಂ. ಮದರಿ (ವಿಜಯಪುರ), ಹಾಜಿ ಅಬ್ದುಲ್ಲಾ ಪರಕಳ (ಉಡುಪಿ), ಮಿಮಿಕ್ರಿ ದಯಾನಂದ (ಮೈಸೂರು), ಡಾ. ಕಬ್ಬನಾಲೆ ವಸಂತ ಭಾರದ್ವಾಜ್ (ಮೈಸೂರು), ಲೆಫ್ಟಿನೆಂಟ್ ಜನರಲ್ ಕೊಡಗಿನ ಪೂವಯ್ಯ ಕಾರ್ಯಪ್ಪ (ಕೊಡಗು).

ಮಾಧ್ಯಮ ದಿನೇಶ್ ಅಮೀನ್ ಮಟ್ಟು (ದ.ಕನ್ನಡ), ಜವರಪ್ಪ (ಮೈಸೂರು), ಮಾಯಾ ಶರ್ಮ (ಬೆಂಗಳೂರು), ರಫಿ ಭಂಡಾರಿ (ವಿಜಯಪುರ). ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಎಸ್. ಸೋಮನಾಥನ್ ಶ್ರೀಧರ್ ಪನಿಕರ್ (ಬೆಂಗಳೂರು), ಪ್ರೊ॥ ಗೋಪಾಲನ್ ಜಗದೀಶ್ (ಚಾಮರಾಜನಗರ).

ಹೊರನಾಡು-ಹೊರದೇಶ : ಸೀತಾರಾಮ ಅಯ್ಯಂಗಾರ್, ದೀಪಕ್ ಶೆಟ್ಟಿ, ಶಶಿಕಿರಣ್ ಶೆಟ್ಟಿ.

ಸ್ವಾತಂತ್ರ್ಯ ಹೋರಾಟಗಾರ : ಪುಟ್ಟಸ್ವಾಮಿ ಗೌಡ (ರಾಮನಗರ).

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನವಾದ ಸಂಘ ಸಂಸ್ಥೆಗಳು : ಕರ್ನಾಟಕ ಸಂಘ (ಶಿವಮೊಗ್ಗ), ಬಿ.ಎನ್. ಶ್ರೀರಾಮ ಪುಸ್ತಕ ಪ್ರಕಾಶನ (ಮೈಸೂರು), ಮಿಥಿಕ್ ಸೊಸೈಟಿ (ಬೆಂಗಳೂರು), ಕರ್ನಾಟಕ ಸಾಹಿತ್ಯ ಸಂಘ (ಯಾದಗಿರಿ), ಮೌಲಾನಾ ಆಜಾದ್ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಾಂಸ್ಕೃತಿಕ ಸಂಘ, ದಾವಣಗೆರೆ, ಮುಸ್ಲಿಮ್ ಶಿಕ್ಷಣ ಸಂಸ್ಥೆಗಳ ಒಕ್ಕೂಟ ದಕ್ಷಿಣ ಕನ್ನಡ, ಸ್ನೇಹರಂಗ ಹವ್ಯಾಸಿ ಕಲಾ ಸಂಸ್ಥೆ, ಬಾಗಲಕೋಟೆ, ಚಿಣ್ಣರ ಬಿಂಬ ಮುಂಬೈ, ಮಾರುತಿ ಜನಸೇವಾ ಸಂಘ, ದ.ಕನ್ನಡ, ವಿದ್ಯಾದಾನ ಸಮಿತಿ, ಗದಗ.


## ಶ್ರೀ ದುರ್ಗಾಂಬಿಕಾ ವಿದ್ಯಾಸಂಸ್ಥೆ (ರಿ), ಶಿವಾಜಿನಗರ, ದಾವಣಗೆರೆ-577 001

### ಶ್ರೀ ದುರ್ಗಾಂಬಿಕಾ ಸಂಯುಕ್ತ ಪ್ರೌಢಶಾಲೆ, ಹೊಂಡದ ರಸ್ತೆ, ದಾವಣಗೆರೆ-577 001

ಸಂಖ್ಯೆ : 93/2023-24 ದಿನಾಂಕ : 27.10.2023

### ಬೇಕಾಗಿದ್ದಾರೆ

ಶ್ರೀ ದುರ್ಗಾಂಬಿಕಾ ವಿದ್ಯಾಸಂಸ್ಥೆ (ರಿ), ಶಿವಾಜಿನಗರ, ದಾವಣಗೆರೆ-577001 ಇದರ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ದುರ್ಗಾಂಬಿಕಾ ಸಂಯುಕ್ತ ಪ್ರೌಢಶಾಲೆ (ಅನುದಾನಿತ), ಹೊಂಡದ ರಸ್ತೆ, ದಾವಣಗೆರೆ- 577001 ಈ ಶಾಲೆಯಲ್ಲಿ ಖಾಲಿ ಇರುವ ಸಹ ಶಿಕ್ಷಕ ಹಿಂದಿ ಬೋಧಕ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು ಮಾನ್ಯ ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಜ್ಞಾಪನ ಪತ್ರ ಸಂಖ್ಯೆ: ಸಿ.8(3)/ಖಾಹುಭ/1022597/2022-23 ದಿನಾಂಕ:20.03.2023 ಹಾಗೂ ಮಾನ್ಯ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ, ದಾವಣಗೆರೆ ರವರ ಜ್ಞಾಪನ ಪತ್ರ ಸಂಖ್ಯೆ:ಅನು2/ಖಾಪ್ರೌಶಾಹುಭಅನು/01/2023- 24 ದಿ:12.10.2023 ಮತ್ತು ಸರ್ಕಾರಿ ಆದೇಶ ಸಂಖ್ಯೆ:ಇಡಿ.46.ಎಸ್.ಇಪಿ.2006 ದಿನಾಂಕ: 12.04.2006 ನೇಮಕಾತಿ ಆದೇಶದ ಪ್ರಕಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

| ಕ್ರ.ಸಂ. | ಶಾಲೆಯ ಹೆಸರು | ಹುದ್ದೆ | ವಿದ್ಯಾರ್ಹತೆ | ಬೋಧನಾ ಮಾಧ್ಯಮ | ಖಾಲಿ ಹುದ್ದೆಗಳ ಸಂಖ್ಯೆ | ಮೀಸಲಾತಿ | ಷರಾ |
|---|---|---|---|---|---|---|---|
| 1 | ಶ್ರೀ ದುರ್ಗಾಂಬಿಕಾ ಸಂಯುಕ್ತ ಪ್ರೌಢಶಾಲೆ ಹೊಂಡದ ರಸ್ತೆ, ದಾವಣಗೆರೆ | ಸಹ ಶಿಕ್ಷಕ (ಹಿಂದಿ) | ಬಿ.ಎ ಬಿ.ಇಡಿ., | ಹಿಂದಿ | 01 | ಪ.ಜಾತಿ (ಎಸ್.ಸಿ) | - |

1) ಆಯ್ಕೆ ಬಯಸುವ ಅಭ್ಯರ್ಥಿಗಳು ಒಂದು ಪ್ರತಿಯನ್ನು ಉಪನಿರ್ದೇಶಕರು, ಪ್ರಾಢಶಾಲಾ ಶಿಕ್ಷಣ ಇಲಾಖೆ (ಆಡಳಿತ), ದಾವಣಗೆರೆ ಜಿಲ್ಲೆ, ದಾವಣಗೆರೆ ಇವರಿಗೆ ಸಲ್ಲಿಸುವುದು.

2) ಅರ್ಹ ಅಭ್ಯರ್ಥಿಗಳು ಪೂರ್ಣ ಮಾಹಿತಿ ಹಾಗೂ ದೃಢೀಕೃತ ದಾಖಲೆಗಳೊಂದಿಗೆ ಅರ್ಜಿಯನ್ನು ಈ ಜಾಹಿರಾತು ಪ್ರಕಟಣೆಯಾದ 21 ದಿನಗಳ ಒಳಗಾಗಿ ಈ ಕೆಳ ಕಾಣಿಸಿದ ವಿಳಾಸಕ್ಕೆ ಅರ್ಜಿ ಸಲ್ಲಿಸಿ, ಅರ್ಜಿಯ ಒಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು (ಆಡಳಿತ), ಪ್ರೌಢಶಾಲಾ ಶಿಕ್ಷಣ ಇಲಾಖೆ, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರಿಗೆ ಸಲ್ಲಿಸತಕ್ಕದ್ದು, ಅರ್ಜಿಯ ಜೊತೆ ರೂ:1000-00 (ರೂಪಾಯಿ ಒಂದು ಸಾವಿರ) ರಾಷ್ಟ್ರೀಕೃತ ಬ್ಯಾಂಕುಗಳ 'ಡಿ.ಡಿ./ಐ.ಪಿ.ಓ. ಅನ್ನು ಅಧ್ಯಕ್ಷರು / ಕಾರ್ಯದರ್ಶಿ, ಶ್ರೀ ದುರ್ಗಾಂಬಿಕಾ ವಿದ್ಯಾಸಂಸ್ಥೆ (ರಿ), ಶಿವಾಜಿನಗರ, ದಾವಣಗೆರೆ ಇವರ ಹೆಸರಲ್ಲಿ ಸಲ್ಲಿಸತಕ್ಕದ್ದು. ಸಂದರ್ಶನ ದಿನಾಂಕವನ್ನು ಮುಂದೆ ತಿಳಿಸಲಾಗುವುದು, ನಿಗದಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ 9483748275 ಸಂಪರ್ಕಿಸಬಹುದು.

**ಅಧ್ಯಕ್ಷರು / ಕಾರ್ಯದರ್ಶಿ**
ಶ್ರೀ ದುರ್ಗಾಂಬಿಕಾ ವಿದ್ಯಾಸಂಸ್ಥೆ (ರಿ.) ಶಿವಾಜಿನಗರ, ದಾವಣಗೆರೆ - 577001

**ಸಹಿ /- ಕಾರ್ಯದದರ್ಶಿ**
ಶ್ರೀ ದುರ್ಗಾಂಬಿಕಾ ವಿದ್ಯಾಸಂಸ್ಥೆ (ರಿ.) ಶಿವಾಜಿನಗರ, ದಾವಣಗೆರೆ - 577001



## ಒಟ್ಟಿಗೆ 8 ಜ್ಯೋತಿರ್ಲಿಂಗಗಳ ದರ್ಶನದ ಪುಣ್ಯ ಪ್ರವಾಸ, ರಾಣೇಬೆನ್ನೂರಿನಿಂದ

**ಪ್ರವಾಸಿಗರ ಮೆಚ್ಚುಗೆ ಮೇರೆಗೆ ಸತತ 6ನೇ ಬಾರಿಗೆ ಎಸ್.ಎಸ್.ವ್ಹಿ.ಟೂರ್ಸ್ & ಟ್ರಾವೆಲ್ಸ್ ವತಿಯಿಂದ**

**ದಿನಾಂಕ : 27.11.2023 ರಿಂದ 10.12.2023 ರವರೆಗೆ**

ಸುಸಜ್ಜಿತ 2+2 ಸೀಟಿನ ಪುಶ್‌ಬ್ಯಾಕ್ ಬಸ್ಸಿನಲ್ಲಿ 14 ದಿನಗಳ ಪ್ರವಾಸ.

1) ಪರಳಿ ಶ್ರೀ ವೈದ್ಯನಾಥ ಜ್ಯೋತಿರ್ಲಿಂಗ 2) ಶ್ರೀ ಘ್ರೀಷ್ಣೇಶ್ವರ ಜ್ಯೋತಿರ್ಲಿಂಗ 3) ಶ್ರೀ ಓಂಕಾರೇಶ್ವರ ಜ್ಯೋತಿರ್ಲಿಂಗ 4) ಉಜ್ಜಯಿನಿ ಶ್ರೀಮಹಾಕಾಳೇಶ್ವರ ಜ್ಯೋತಿರ್ಲಿಂಗ 5) ಶ್ರೀನಾಗ ನಾಗೇಶ್ವರ ಜ್ಯೋತಿರ್ಲಿಂಗ 6) ಸೌರಾಷ್ಟ್ರ ಶ್ರೀಸೋಮನಾಥ ಜ್ಯೋತಿರ್ಲಿಂಗ 7) ಶ್ರೀ ತ್ರಂಬಕೇಶ್ವರ ಜ್ಯೋತಿರ್ಲಿಂಗ 8) ಶ್ರೀ ಭೀಮಾಶಂಕರ ಜ್ಯೋತಿರ್ಲಿಂಗಗಳ ದರ್ಶನದೊಂದಿಗೆ. ದ್ವಾರಕಾ ನಗರದ ಶ್ರೀಕೃಷ್ಣಮಂದಿರ, ಭಾವನಗರದಲ್ಲಿನ ಸಮುದ್ರದಾಳ ದಲ್ಲಿನ ಶಿವಲಿಂಗ, ವಡೋದರದ ವಿಶ್ವವಿಖ್ಯಾತ ಸರ್ದಾರ ವಲ್ಲಬಾಯ್ ಪಟೇಲರವರ ಸ್ಟ್ಯಾಚ್ಯೂ, ಶಿರಡಿ ಶ್ರೀಸಾಯಿಬಾಬಾ, ನಾಸಿಕ ಪಂಚವಟಿ, ಶನಿಸಿಂಗಣಾಪೂರ, ಚಿಕ್ಕತಿರುಪತಿ, ಕೊಲ್ಲಾಪುರ, ಶ್ರೀ ಮಹಾಲಕ್ಷ್ಮೀ ದರ್ಶನವಿರುತ್ತದೆ.

**ಊಟ, ಉಪಹಾರ, ವಸತಿ, ಸೌಲಭ್ಯದೊಂದಿಗೆ ಪ್ಯಾಕೇಜಿನ ದರ ಒಬ್ಬರಿಗೆ 28000 ಸಾವಿರ ರೂ.ಗಳು ಮಾತ್ರ.**

**ಆಸಕ್ತರು ಸಂಪರ್ಕಿಸಿರಿ ಶ್ರೀ ಬಿ.ಎ. ಸುನೀಲ್ ದೇವರಗುಡ್ಡ.**
**ಮೊ. 99014 23999**

ಸೀಮಿತ ಆಸನಗಳು ಮಾತ್ರವಿದ್ದು, ಮೊದಲು ಬಂದವರಿಗೆ ಮೊದಲ ಆದ್ಯತೆ. ಸಹಕಾರ ನಿಮ್ಮದು, ನಿಮ್ಮ ಸೇವೆ ಮಾಡುವ ಕಾಯಕ ನಮ್ಮದು.


## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ


ಜನನ : 06.03.1997, ನಿಧನ : 22.10.2023

ದಾವಣಗೆರೆ ವಾಸಿಯಾದ
**ಶ್ರೀಮತಿ ಅನಿತಾ**
**ಶ್ರೀ ಎಸ್. ಸುರೇಶ್ ಬಾಬು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 22.10.2023ನೇ ಭಾನುವಾರ ರಾತ್ರಿ 11.30 ಕ್ಕೆ ನನ್ನ ಮಗನಾದ
**ಶ್ರೀ ಆಕಾಶ್ ಖಂಡಗಾಳೆ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**

ದಿನಾಂಕ 01.11.2023ನೇ ಬುಧವಾರ ಬೆಳಿಗ್ಗೆ 10.30 ಕ್ಕೆ ದಾವಣಗೆರೆ ವಿನಾಯಕ ನಗರದ ವಾಲ್ಮೀಕಿ ಸರ್ಕಲ್ ಬಳಿ ಇರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ : **ಶ್ರೀಮತಿ ಅನಿತಾ ಸುರೇಶ್‌ಬಾಬು, ಎಸ್. ಸುರೇಶ್ ಬಾಬು, ಖಂಡಗಾಳೆ ಮತ್ತು ಮಕ್ಕಳು, ದಾವಣಗೆರೆ**

ಶ್ರೀ ಕೆ. ಏಕಾಂತಪ್ಪ, ಸಂಪಾದಕರು, ಮಲ್ನಾಡವಾಣಿ ದಿನಪತ್ರಿಕೆ ಹಾಗೂ ಅಧ್ಯಕ್ಷರು ಜಿಲ್ಲಾ ವರದಿಗಾರರ ಕೂಟ, ದಾವಣಗೆರೆ.
ಶ್ರೀ ಜೆ.ಎಸ್. ವೀರೇಶ್ ಸಂಪಾದಕರು, ದಾವಣಗೆರೆ ಟೈಮ್ಸ್ ಕನ್ನಡ ದಿನಪತ್ರಿಕೆ ದಾವಣಗರೆ.
ಶ್ರೀ ಮಂಜುನಾಥ ಜಿ.ಎಂ. ಸಂಪಾದಕರು, ನಮ್ಮಗುರಿ ಕನ್ನಡ ದಿನಪತ್ರಿಕೆ, ದಾವಣಗೆರೆ (ಹರಿಹರ).

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

## ಜಿಲ್ಲಾಡಳಿತದಿಂದ ಇಂದು ರಾಜ್ಯೋತ್ಸವ

ಜಿಲ್ಲಾಡಳಿತದ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ರಾಜ್ಯೋತ್ಸವ ಜರುಗಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸುವರು. ಇದಕ್ಕೂ ಮುನ್ನ ಬೆಳಿಗ್ಗೆ 8.30 ಕ್ಕೆ ಸರ್ಕಾರಿ ಬಾಲಕರ ಪೌಢಶಾಲಾ ಮೈದಾನದ ಆವರಣದಲ್ಲಿ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಲಾಗುವುದು. ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕರುಗಳಾದ ಕೆ.ಎಸ್.ಬಸವಂತಪ್ಪ ಮತ್ತಿತರರು ಭಾಗವಹಿಸುವರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas


ಹೆಸರಾಯಿತು
ಕರ್ನಾಟಕ
ಉಸಿರಾಗಲಿ ಕನ್ನಡ
ಕರ್ನಾಟಕ
ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ
ಕರ್ನಾಟಕಕ್ಕೆ
50ರ
ಸಂಭ್ರಮ
“ ನೆಲ, ಜಲ, ಭಾಷೆ ರಕ್ಷಣೆಗೆ
ಸರ್ಕಾರ ಸದಾ ಸಿದ್ಧ ”
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ನಾಡಿನ ಸಮಸ್ತ ಜನತೆಗೆ
೬೮ನೇ ರಾಜ್ಯೋತ್ಸವದ
ಶುಭಾಶಯಗಳು
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿ
ವರ್ಷವಿಡೀ ಕರ್ನಾಟಕ ಸಂಭ್ರಮ
ದಿನಾಂಕ: 1-11-2023 ರಿಂದ 1-11-2024 ರ ವರೆಗೆ
ನುಡಿದಂತೆ
ನಡೆದಿದ್ದೇವೆ...
ಶಕ್ತಿ
ಮಹಿಳೆಯರಿಗೆ
ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ
ಪ್ರತಿ ಮನೆಗೆ
200 ಯೂನಿಟ್‌ವರೆಗೆ
ವಿದ್ಯುತ್ ಉಚಿತ
ಅನ್ನಭಾಗ್ಯ
ಬಡವರಿಗೆ
ಪ್ರತಿ ತಿಂಗಳು 10 kg
5 ಕೆಜಿ ಆಹಾರಧಾನ್ಯ
ಬದಲಿಗೆ ರೂ. 170
ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು
₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ಪದವೀಧರರಿಗೆ
₹1500 ಡಿಪ್ಲೋಮಾ ಪದವೀಧರರಿಗೆ
“ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು
ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ”
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ

# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಬುಧವಾರ, ನವೆಂಬರ್ 01, 2023


# ರಾಜ್ಯದಲ್ಲಿ ಕಲ್ಲಿದ್ದಲು ಇಲ್ಲದೇ ಕಗ್ಗತ್ತಲಿನ ಅಪಾಯ



## ಶಾಖೋತ್ಪನ್ನ ವಿದ್ಯುತ್ ಘಟಕಗಳ ಕಾರ್ಯನಿರ್ವಹಣೆಗೆ ತೊಡಕು

ಬೆಂಗಳೂರು, ಅ. 31 - ಶಾಖೋತ್ಪನ್ನ ವಿದ್ಯುತ್ ಘಟಕಗಳಿಗೆ ಕಲ್ಲಿದ್ದಲು ಇಲ್ಲದೆ ಕರ್ನಾಟಕ ಕಗ್ಗತ್ತಲಿನತ್ತ ಸಾಗುವ ಅಪಾಯ ಎದುರಾಗಿದೆ.

ರಾಜ್ಯದ 19 ಶಾಖೋತ್ಪನ್ನ ವಿದ್ಯುತ್ ಘಟಕಗಳ ಪೈಕಿ ಕಲ್ಲಿದ್ದಲ ಕೊರತೆಯಿಂದ ಕೇವಲ 11 ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ, ಹಾಲಿ ಇರುವ ಕಲ್ಲಿದ್ದಲು ದಾಸ್ತಾನು ಕೇವಲ ನಾಲ್ಕೈದು ದಿನಗಳಿಗೆ ಸಾಕಾಗಲಿದೆ. ಇಷ್ಟರೊಳಗೆ ಕಲ್ಲಿದ್ದಲು ಖರೀದಿಸದಿದ್ದರೆ, ಇಡೀ ಕರ್ನಾಟಕ ಕತ್ತಲಲ್ಲಿ ಮುಳುಗಲಿದೆ. ಎಲ್ಲಾ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳು ಕಾರ್ಯನಿರ್ವಹಿಸಿದರೆ ಪ್ರತಿನಿತ್ಯ 11 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗಲಿದೆ.

ಕಲ್ಲಿದ್ದಲು ಕೊರತೆಯಿಂದ ಈಗಾಗಲೇ 8 ಸ್ಥಾವರಗಳು ಮುಚ್ಚಿದ್ದು, ಇದರಿಂದ 5 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಕೊರತೆಯಾಗಿದೆ. ಇನ್ನು ನಾಲ್ಕೈದು ದಿನಗಳಲ್ಲಿ ಸ್ಥಾವರಗಳಿಗೆ ಅಗತ್ಯ ಕಲ್ಲಿದ್ದಲು ಪೂರೈಕೆ ಆಗದಿದ್ದರೆ, ಕಾರ್ಯ ಸಂಪೂರ್ಣ ಸ್ಥಗಿತಗೊಳ್ಳಲಿವೆ.

ರಾಯಚೂರು, ಬಳ್ಳಾರಿ, ಮಾನ್ವಿ ಸೇರಿದಂತೆ ರಾಜ್ಯದ ಬಹುತೇಕ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳು ಕಲ್ಲಿದ್ದಲಿಗಾಗಿ ಪರದಾಡುತ್ತಿವೆ.

ಈ ಮಧ್ಯೆ ಮಳೆ ಕೊರತೆಯಿಂದ ಜಲವಿದ್ಯುತ್ ಘಟಕಗಳೂ ಸಂಕಷ್ಟದಲ್ಲಿದ್ದು, ಲಿಂಗನಮಕ್ಕಿ ಜಲಾಶಯ, ಕಾಳಿ ಜಲಾಶಯ, ವರಾಹಿ ಜಲಾಶಯಗಳಲ್ಲಿ ಪ್ರಸ್ತುತ ಶೇ. 40ರಿಂದ 60ರಷ್ಟು ನೀರು ಸಂಗ್ರಹ ಇದೆ.

ಸಂಕಷ್ಟ ಸಂದರ್ಭದಲ್ಲಿ ಜಲವಿದ್ಯುತ್ ಬಳಕೆ ಮಾಡಿಕೊಳ್ಳಲು ನಿರ್ಧರಿಸಿರುವ ಸರ್ಕಾರ, ಮುಂಬರುವ ಲೋಕಸಭಾ ಚುನಾವಣೆ ಏಪ್ರಿಲ್-ಮೇನಲ್ಲಿ ನಡೆಯಲಿದ್ದು, ಆ ಸಂದರ್ಭದಲ್ಲಿ ಜಲ ವಿದ್ಯುತ್ ಬಳಕೆಗೆ ನಿರ್ಧರಿಸಿದೆ. ಚುನಾವಣಾ ಸಂದರ್ಭದಲ್ಲಿ ವಿದ್ಯುತ್ ಅಭಾವ ಉಂಟಾದರೆ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ಹಿನ್ನಡೆ ಆಗಬಹುದೆಂಬ ಮುಂದಾಲೋಚನೆಯಿಂದ ಈ ಕ್ರಮಕ್ಕೆ ಮುಂದಾಗಿದೆ.

ಈ ಸಂದರ್ಭದಲ್ಲಿ ವಿದ್ಯುತ್ ಉತ್ಪಾದನೆಗೆ ಅವಕಾಶ ಮಾಡಿಕೊಡಲು ನೀರಿನ ಸಂಗ್ರಹವನ್ನು ಕಾಯ್ದಿಟ್ಟುಕೊಂಡಿದೆ. ಆರ್ಥಿಕ ಸಂಕಷ್ಟದಲ್ಲಿರುವ ರಾಜ್ಯ ಸರ್ಕಾರ ಕೆಪಿಟಿಸಿಎಲ್ ಮತ್ತು ವಿದ್ಯುತ್ ಕಂಪನಿಗಳಿಗೆ ಒಟ್ಟು 40,000 ಕೋಟಿ ರೂ. ಬಾಕಿ ಕೊಡಬೇಕಿದೆ.

ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿಗೆ ಕೆಪಿಟಿಸಿಎಲ್, ಸರ್ಕಾರದಿಂದ ಬರಬೇಕಿರುವ 40,000 ಕೋಟಿ ರೂ.ಗಳನ್ನು ಪಡೆಯಲು ಪರದಾಡುತ್ತಿದೆ.

ಒಂದು ರೇಕ್‌ನಷ್ಟು ಕಲ್ಲಿದ್ದಲನ್ನು ಕೇಂದ್ರ ಸರ್ಕಾರ ಕಳಿಸುತ್ತಿದ್ದು, ಇದರಿಂದ ಉಷ್ಣ ವಿದ್ಯುತ್ ಸ್ಥಾವರಗಳು ಇನ್ನೊಂದು ವಾರ ಉಸಿರಾಡಬಹುದಾಗಿದೆ.

# ರಾಜ್ಯದಲ್ಲಿ 68 ಸಾಧಕರು, 10 ಸಂಘ-ಸಂಸ್ಥೆ ಗಳಿಗೆ ಪ್ರಶಸ್ತಿ

ಬೆಂಗಳೂರು, ಅ. 31 - ಇಸ್ರೋ ಅಧ್ಯಕ್ಷ ಸೋಮನಾಥ್, ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ವಿ. ಗೋಪಾಲಗೌಡ, ಕಿದ್ವಾಯಿ ಕ್ಯಾನ್ಸರ್ ಸಂಸ್ಥೆ ನಿರ್ದೇಶಕ ಡಾ. ರಾಮಚಂದ್ರ, ಮಾಧ್ಯಮ ಕ್ಷೇತ್ರದ ಮಾಯಾ ಶರ್ಮ, ಸ್ವಾತಂತ್ರ್ಯ ಹೋರಾಟಗಾರ ಪುಟ್ಟಸ್ವಾಮಿ ಗೌಡ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಪ್ರೊ॥ಗೋಪಾಲನ್ ಸೇರಿದಂತೆ, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ 68 ಸಾಧಕರಿಗೆ ಹಾಗೂ 10 ಸಂಘ - ಸಂಸ್ಥೆಗಳಿಗೆ ಪ್ರಸಕ್ತ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಲಾಗಿದೆ.

ನವೆಂಬರ್ 1 ರಂದು ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾಧಕರನ್ನು ಗೌರವಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಪುರಸ್ಕೃತರಿಗೆ ಐದು ಲಕ್ಷ ನಗದು ಹಾಗೂ 25 ಗ್ರಾಂ ಚಿನ್ನದ ಪದಕ ನೀಡಿ ಗೌರವಿಸಲಾಗುವುದು ಎಂದರು.

ಸಾಹಿತಿ ಜಾಣಗೆರೆ ವೆಂಕಟರಾಮಯ್ಯ ನೇತೃತ್ವದ ಉನ್ನತ ಮಟ್ಟದ ಸಮಿತಿ ಪ್ರಶಸ್ತಿ ಪಟ್ಟಿಯನ್ನು ಶಿಫಾರಸ್ಸು ಮಾಡಿತ್ತು.

ಪುರಸ್ಕೃತರ ಪಟ್ಟಿ ಇಂತಿದೆ : ಸಮಾಜ ಸೇವೆ ಕ್ಷೇತ್ರದಲ್ಲಿ ಹುಚ್ಚಮ್ಮ ಬಸಪ್ಪ ಚೌದ್ರಿ (ಕೊಪ್ಪಳ), ಚಾರ್ಮಾಡಿ ಹಸನಬ್ಬ ದ.ಕನ್ನಡ), ಕೆ.ರೂಪ್ಲಾನಾಯಕ್ (ದಾವಣಗೆರೆ), ನಿಜಗುಣಾನಂದ ಸ್ವಾಮೀಜಿ (ನಿಷ್ಕಲ ಮಂಟಪ, ಬೆಳಗಾವಿ), ಜಿ.ನಾಗರಾಜು (ಬೆಂಗಳೂರು) ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಆಡಳಿತ ಕ್ಷೇತ್ರದಲ್ಲಿ ಜಿ.ವಿ.ಬಲರಾಮ್ (ತುಮಕೂರು), ರಾಜ್ಯೋತ್ಸವ ಪ್ರಶಸ್ತಿ ಪ್ರಕಟಿಸಲಾಗಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ಡಾ.ಸಿ. ರಾಮಚಂದ್ರ (ಬೆಂಗಳೂರು), ಡಾ. ಪ್ರಶಾಂತ್ ಶೆಟ್ಟಿ(ದ.ಕನ್ನಡ), ಸಾಹಿತ್ಯ ಕ್ಷೇತ್ರದಲ್ಲಿ ಪ್ರೊ. ಸಿ. ನಾಗಣ್ಣ (ಚಾಮರಾಜನಗರ), ಸುಬ್ಬು ಹೊಲೆಯಾರ್ (ಹೆಚ್.ಕೆ. ಸುಬ್ಬಯ್ಯ, ಹಾಸನ), ಸತೀಶ್ ಕುಲಕರ್ಣಿ (ಹಾವೇರಿ), ಲಕ್ಷ್ಮೀಪತಿ ಕೋಲಾರ (ಕೋಲಾರ), ಪರಪ್ಪ ಗುರುಪಾದಪ್ಪ ಸಿದ್ದಾಪುರ (ವಿಜಯಪುರ), ಡಾ. ಕೆ.ಷರೀಫಾ (ಬೆಂಗಳೂರು) ಪ್ರಶಸ್ತಿ ಘೋಷಿಸಲಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ರಾಮಪ್ಪ ಹವಳೆ (ರಾಯಚೂರು), ಕೆ. ಚಂದ್ರಶೇಖರ್ (ಕೋಲಾರ), ಕೆ.ಟಿ. ಚಂದು (ಮಂಡ್ಯ).

ಕ್ರೀಡಾ ಕ್ಷೇತ್ರದಲ್ಲಿ ಕುಮಾರಿ ಟಿ.ಎಸ್. ದಿವ್ಯಾ (ಕೋಲಾರ), ಅದಿತಿ ಅಶೋಕ್ (ಬೆಂಗಳೂರು), ಅಶೋಕ್ ಗದಿಗೆಪ್ಪ ಏಣಗಿ (ಧಾರವಾಡ).

ಚಲನಚಿತ್ರ ಕ್ಷೇತ್ರದಲ್ಲಿ ಡಿಂಗ್ರಿ ನಾಗರಾಜ್, ಬಿ. ಜನಾರ್ಧನ್ (ಬ್ಯಾಂಕ್ ಜನಾರ್ಧನ್) (ಬೆಂಗಳೂರು).

ರಂಗಭೂಮಿ ಕ್ಷೇತ್ರ, (2ನೇ ಪುಟಕ್ಕೆ)

# ಮಸೂದೆಗಳನ್ನು ಅಂಗೀಕರಿಸದ ರಾಜ್ಯಪಾಲರು : ಸುಪ್ರೀಂ ಮೊರೆ ಹೋದ ತಮಿಳುನಾಡು, ಪಂಜಾಬ್

ನವದೆಹಲಿ, ಅ. 31 – ತಮ್ಮ ವಿಧಾನಸಭೆಗಳು ಅಂಗೀಕರಿಸಿರುವ ಮಸೂದೆಗಳಿಗೆ ರಾಜ್ಯಪಾಲರು ಅಂಗೀಕಾರ ನೀಡುತ್ತಿಲ್ಲ ಎಂದು ಆಕ್ಷೇಪಿಸಿ ತಮಿಳುನಾಡು ಹಾಗೂ ಪಂಜಾಬ್ ರಾಜ್ಯಗಳು ಸುಪ್ರೀಂ ಕೋರ್ಟ್ ಮೊರೆ ಹೋಗಿವೆ. ಸಂವಿಧಾನಿಕ ಪ್ರಾಧಿಕಾರವಾದ ರಾಜ್ಯಪಾಲರು ಸಂವಿಧಾನ ವಿರೋಧಿಯಾಗಿ ವರ್ತಿಸುತ್ತಿದ್ದಾರೆ. ರಾಜ್ಯ ಸರ್ಕಾರದ ಕಾರ್ಯನಿರ್ವಹಣೆಗೆ ಅಡ್ಡಿಪಡಿಸುತ್ತಿದ್ದಾರೆ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ.

# ಸಮಸ್ಯೆಗಳ ಕಟ್ಟು ಬಿಚ್ಚಿಟ್ಟು ಹೆಸರಿಗೆ ಪಟ್ಟು

## ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ವಾರ್ಡ್ ಸಮಸ್ಯೆಗಳ ಅನಾವರಣ



ದಾವಣಗೆರೆ, ಅ.31- ಸುಮಾರು ಏಳು ತಿಂಗಳ ನಂತರ ನಡೆದ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ನೀರು, ಕಸ, ಬೀದಿ ನಾಯಿ, ಪೌರ ಕಾರ್ಮಿಕರ ಸಮಸ್ಯೆ, ಕಂದಾಯ ವಿಭಾಗದಲ್ಲಿ ಲಂಚಾವತಾರ ಹೀಗೆ ಅನೇಕ ವಿಷಯಗಳ ಕುರಿತು ಚರ್ಚೆಗಳು ನಡೆದವು. ಪಾಲಿಕೆ ಸದಸ್ಯರು ಪಕ್ಷಭೇದ ಮರೆತು ತಮ್ಮ ವಾರ್ಡುಗಳಲ್ಲಿನ ಸಮಸ್ಯೆಗಳನ್ನು ಅನಾವರಣಗೊಳಿಸಿದರು.

ಇದರ ಬೆನ್ನಲ್ಲೇ ಶಿವಪಾರ್ವತಿ ಬಡಾವಣೆ ಹಾಗೂ ಖಾಸಗಿ ಬಸ್ ನಿಲ್ದಾಣದ ಹೆಸರಿನ ವಿಷಯ ಕುರಿತು ಎರಡೂ ಪಕ್ಷದ ಸದಸ್ಯರು ಪರಸ್ಪರ ವಾಗ್ವಾದ ನಡೆಸಿದರು. ತಮ್ಮದೇ ಪಕ್ಷದ ಮುಖಂಡರ ಹೆಸರುಗಳಿಗೆ ಪಟ್ಟು ಹಿಡಿದು ಕುಳಿತ ಘಟನೆಯೂ ನಡೆಯಿತು.

ಬಿ.ಹೆಚ್. ವಿನಾಯಕ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಾಮಾನ್ಯ ಸಭೆ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ಮಾತಿನ ಕಾಳಗದಿಂದಲೇ ಆರಂಭವಾಯಿತು. 11 ಗಂಟೆಗೆ ಸಭೆ ನಿಗದಿಯಾಗಿತ್ತು. ಆಯುಕ್ತರು ಹಾಗೂ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಆಗಮಿಸಿದ್ದರು. ನಂತರ ಬಿಜೆಪಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ, ಕಾಂಗ್ರೆಸ್ ಸದಸ್ಯರು ಕಡಿಮೆ ಸಂಖ್ಯೆಯಲ್ಲಿ ಆಗಮಿಸಿದರು.

ಕೋರಂ ಕೊರತೆಯ ಮಾತುಗಳು ಕೇಳಿ ಬಂದವು. ಪಾಲಿಕೆ ವಿಪಕ್ಷ ನಾಯಕ ಕೆ.ಪ್ರಸನ್ನಕುಮಾರ್, ಸಭೆಗೆ ಸಮಯಕ್ಕೆ ಸರಿಯಾಗಿ ಬಾರದ ಸದಸ್ಯರ ವಿರುದ್ಧ ಅಸಮಾಧಾನಗೊಂಡು, ತಡವಾಗಿ ಬರುವವರಿಗೆ ಅವಕಾಶ ನೀಡಬೇಡಿ ಎಂದಾಗ, ಕಾಂಗ್ರೆಸ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಮಾತಿನ ಚಕಮಕಿಯ ನಡುವೆಯೇ ಕೋರಂ ಕೊರತೆ ನೀಗಿ 11.40ಕ್ಕೆ ಸಭೆ ಆರಂಭವಾಯಿತು.

ಸಮಸ್ಯೆಗಳ ಕುರಿತ ಚರ್ಚೆಗಾಗಿ 1 ಗಂಟೆ ಶೂನ್ಯ ಅವಧಿ ನೀಡಲಾಗಿತ್ತಾದರೂ, 2 ಗಂಟೆವರೆಗೂ ಚರ್ಚೆಗಳು ನಡೆದವು. ನಂತರವೇ ನಡಾವಳಿಕೆ ಪ್ರಕಾರ ಚರ್ಚೆಗಳು ಆರಂಭವಾದವು.

19ನೇ ವಾರ್ಡ್ ಸದಸ್ಯ ಶಿವ ಪ್ರಕಾಶ್ ಆರ್.ಎಲ್., ನಮ್ಮ ಗಮನಕ್ಕೆ ತಾರದೆಯೇ ರೈಲ್ವೇ ಗೇಟ್ ಬಳಿ ರಸ್ತೆ ನಿರ್ಮಾಣಕ್ಕೆ ಮುಂದಾಗಿರುವುದಕ್ಕೆ ಆಕ್ಷೇಪಿಸಿದರು. ಸಾರ್ವಜನಿಕರ ಒತ್ತಾಯಕ್ಕೆ ನಿರ್ಣಯಕ್ಕೆ ಬರಲಾಗಿದೆ. ಇನ್ನೂ ಅಪ್ರೂವಲ್ ಮಾಡಿಲ್ಲ. ಸಭೆಯಲ್ಲಿ ಬೇಡ ಎಂದರೆ ಪ್ರಸ್ತಾವನೆ ಕೈ ಬಿಡುವುದಾಗಿ ಆಯುಕ್ತೆ ರೇಣುಕಾ ಹೇಳಿದರು. ವಾರ್ಡ್‌ನಲ್ಲಿ ಶೌಚಾಲಯ ನಿರ್ಮಾಣ ಮಾಡಿದ ಕಾಮಗಾರಿಗೆ ಹಣ ಬಿಡಗಡೆ ಮಾಡಿಲ್ಲ ಎಂದು ಸದಸ್ಯ ಶಿವಪ್ರಕಾಶ್ ದೂರಿದರು.

ಉಮಾ ಪ್ರಕಾಶ್, ತಮ್ಮ ವಾರ್ಡ್‌ನ ಎರಡು ಕಾಮಗಾರಿ ರದ್ದು ಮಾಡಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿ, ಮರು ಟೆಂಡರ್‌ಗೆ ಎರಡು ವರ್ಷಗಳು ಬೇಕೇ? ಎಂದು ಪ್ರಶ್ನಿಸಿದರು. ಕೇವಲ 15 ಲಕ್ಷ ಅನುದಾನವನ್ನು ನನ್ನ ವಾರ್ಡ್‌ಗೆ ಕೊಡಲಾಗಿದೆ. ಯಾವ ಕೆಲಸವೂ ನಡೆಯದೇ ಜನರು ನಮ್ಮನ್ನು ಪ್ರಶ್ನಿಸುತ್ತಿದ್ದಾರೆ ಎಂದರು.

ಹಿರಿಯ ಸದಸ್ಯ ಚಮನ್ ಸಾಬ್, 50 ವರ್ಷಗಳ ಹಿಂದಿನ ಆಸ್ತಿಗಳನ್ನು ಇ-ಖಾತೆ ಮಾಡಿಸುವಾಗ ಏನಾದರೂ ದಾಖಲೆ ವ್ಯತ್ಯಾಸವಾಗಿದ್ದರೆ, ಲಕ್ಷಗಟ್ಟಲೆ ಲಂಚ ಕೇಳುತ್ತಾರೆ ಎಂದು ಆರೋಪಿಸಿದರು. ಕೆ.ಪ್ರಸನ್ನಕುಮಾರ್ ಮಾತನಾಡಿ, ಇ ಆಸ್ತಿ ಕುರಿತು ಜನರಲ್ಲಿ ಭಯ ತುಂಬಿದ್ದಾರೆ. 7 ದಿನದೊಳಗೆ ಇ-ಖಾತೆ ಮಾಡಿಕೊಡದಿದ್ರೆ ಕ್ರಮ ತೆಗೆದುಕೊಳ್ಳಿ ಎಂದರು. ಅರ್ಜಿ ನೀಡಿದಾಗ ಟಪಾಲು ವಿಭಾಗದಲ್ಲಿಯೇ ಎಲ್ಲಾ ದಾಖಲೆ ಪರಿಶೀಲಿಸಬೇಕು. ಮೂರ್ನಾಲ್ಕು ತಿಂಗಳು ಅಲೆದಾಡಿಸಬಾರದು ಎಂದು ನಾಗರಾಜ್ ಹೇಳಿದರು.

ಖಾಸಗಿ ಬಸ್ ನಿಲ್ದಾಣವನ್ನು ಸ್ಥಳಾಂತರಿಸುವ ಕುರಿತು ಪ್ರಸನ್ನಕುಮಾರ್ ಚರ್ಚಿಸಿದಾಗ, ಕಾಂಗ್ರೆಸ್ ಸದಸ್ಯರು ಬಸ್ ನಿಲ್ದಾಣ ಅವೈಜ್ಞಾನಿಕವಾಗಿದೆ ಎಂದರು. ಬಿಜೆಪಿ ಸದಸ್ಯರು 14 ಬಸ್ ನಿಲ್ಲಲು ಅವಕಾಶವಿದೆ. ಅವೈಜ್ಞಾನಿಕವಾಗಿಲ್ಲ ಎಂದು ಸಮರ್ಥಿಸಿಕೊಂಡರು.

ಸದಸ್ಯ ಶಿವಾನಂದ, ನೀರಿನ ಸಮಸ್ಯೆ ಹೆಚ್ಚಾಗುತ್ತಿದ್ದು, ಬಿ ಟೀಮ್ ರಚಿಸಿ ಸೂಕ್ತ ಮಾರ್ಗೋಪಾಯ ಕಂಡುಕೊಳ್ಳಬೇಕು. ಎಇಇ ತೀವ್ರ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ದೂರಿದರು. ಸದಸ್ಯ ಕೆ.ಎಂ. ವೀರೇಶ್, ಇಂಜಿನಿಯರ್ ಸೌಜನ್ಯದಿಂದ ವರ್ತಿಸುತ್ತಿಲ್ಲ. ಏನಾದರೂ ಪ್ರಶ್ನಿಸಿದರೆ ಹೊಡೆದಾಡಲು ಬರುವಂತೆ ವರ್ತಿಸುತ್ತಾರೆ ಎಂದರು. ಸದಸ್ಯ ಎ.ನಾಗರಾಜ್, ಪಾಲಿಕೆಯ ಝೋನಲ್ ಆಫೀಸ್‌ಗಳಿಂದ ಸಾರ್ವಜನಿಕರಿಗೆ ಅನುಕೂಲವಾಗಿಲ್ಲ ಎಂದಾಗ, ಅಬ್ದುಲ್ ಲತೀಫ್ ದನಿಗೂಡಿಸಿದರು.

ಪಾಲಿಕೆಯಲ್ಲಿ ಮೇಯರ್ ಮಾತು ನಡೆಯುವುದಿಲ್ಲ. ಕಾಂಗ್ರೆಸ್ ಪರವಾದ ಕೆಲಸಗಳು ಮಾತ್ರ ಬೇಗ ಆಗುತ್ತವೆ ಎಂದು ಹೊರಗಿನಿಂದ ವರದಿಗಳು ಬರುತ್ತಿವೆ ಎಂದು ಅಜಯ್ ಕುಮಾರ್ ಹೇಳಿದಾಗ, ಎ.ನಾಗರಾಜ್ ಹಾಗೂ ಗಡಿಗುಡಾಳ್ ಮಂಜುನಾಥ್ ಆಕ್ಷೇಪಿಸಿದರು. ಸ್ಮಾರ್ಟ್ ಸಿಟಿಗೆ ನಾಮ ನಿರ್ದೇಶಿತ ಸದಸ್ಯರನ್ನು ನೇಮಿಸುವ ಕುರಿತು ಸುದೀರ್ಘ ಚರ್ಚೆ ನಡೆಯಿತು.

**28 ಲಕ್ಷ ಬೆಸ್ಕಾಂ ಬಾಕಿ:** ಬೆಸ್ಕಾಂ ನವರು 28 ಲಕ್ಷ ರೂ. ಪಾಲಿಕೆಗೆ ನೀಡಬೇಕಾದ ಬಾಕಿ ಉಳಿಸಿಕೊಂಡಿದ್ದಾರೆ. ನಾವು ವಿದ್ಯುತ್ ಬಿಲ್ ಕಟ್ಟುವುದು ತಡವಾದರೆ ದಂಡ ಹಾಕುತ್ತಾರೆ ಎಂದು ಆಯುಕ್ತೆ ರೇಣುಕಾ ಹೇಳಿದರು. ಮರದ ಕೊಂಬೆಗಳನ್ನು ಕಡಿದು ಸಾಗಿಸದ ಬೆಸ್ಕಾಂ ವಿರುದ್ಧ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಲಾಯಿತು.

**ಇಸ್ರೋಗೆ ಅಭಿನಂದನೆ:** ಸಭೆಯ ಆರಂಭದಲ್ಲಿ ಚಂದ್ರಯಾನ-3ರ ಯಶಸ್ಸಿಗೆ ಕಾರಣರಾದ ಇಸ್ರೋ ಸಂಸ್ಥೆಯ ಅಧಿಕಾರಿ-ಸಿಬ್ಬಂದಿಗಳಿಗೆ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಚಪ್ಪಾಳೆ ಮೂಲಕ ಅಭಿನಂದಿಸಿ, ಅಭಿನಂದನಾ ಪತ್ರವನ್ನು ಇಸ್ರೋ ಮುಖ್ಯಸ್ಥರಿಗೆ ಕಳುಹಿಸಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಉಪ ಮೇಯರ್ ಯಶೋಧ ಹೆಗ್ಗಪ್ಪ, ಸ್ಥಾಯಿ ಸಮಿತಿ ಸದಸ್ಯರು, ಸದಸ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

### ಗಾಳಿ, ಬೆಳಕು ಇಲ್ಲದ ಸಭೆ

**ಸಭೆ ನಡೆಯುವ ಸಭಾಂಗಣದಲ್ಲಿ ಗಾಳಿ, ಬೆಳಕಿನ ವ್ಯವಸ್ಥೆ ಸರಿಯಾಗಿ ಕಲ್ಪಿಸಿಲ್ಲ, ಮೈಕ್ ಸರಿಯಿಲ್ಲ ಎಂದು ಸದಸ್ಯ ಅಬ್ದುಲ್ ಲತೀಫ್ ಏರು ದನಿಯಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ದನಿಗೂಡಿಸಿದ ಎಸ್.ಟಿ. ವೀರೇಶ್, ಒಂದು ದಿನ ಮೊದಲೇ ಎಲ್ಲವನ್ನೂ ಪರೀಕ್ಷಿಸಬೇಕಿತ್ತು. ಅಧಿಕಾರಿಗಳ ವೈಫಲ್ಯ ಎದ್ದು ಕಾಣುತ್ತಿದೆ ಎಂದರು. ನಿರ್ವಹಣೆ ಪರಿಷತ್ ಕಾರ್ಯದರ್ಶಿ ಕೆಲಸವಾಗಿದ್ದು, ಶೀಘ್ರವೇ ಸರಿಪಡಿಸುವುದಾಗಿ ಆಯುಕ್ತೆ ರೇಣುಕಾ ಹೇಳಿದರು. ಎಸಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಒಂದೊಂದೇ ಫ್ಯಾನ್‌ಗಳನ್ನು ಹೊರಗಡೆಯಿಂದ ತಂದು ಇಡಲಾಗುತ್ತಿತ್ತು. ಮಧ್ಯಾಹ್ನ ಊಟದ ರುಚಿ ಬಗ್ಗೆಯೂ ಕೆಲ ಸದಸ್ಯರು ಅಸಮಾಧಾನಗೊಂಡರು.**

### ಬಡಾವಣೆ-ಬಸ್ ನಿಲ್ದಾಣದ ಹೆಸರಿಗೆ ಜಟಾಪಟಿ

**ಶಿವ ಪಾರ್ವತಿ ಬಡಾವಣೆಗೆ ಜಿ.ಮಲ್ಲಿಕಾರ್ಜುನಪ್ಪ ಹೆಸರಿಡುವ ಕುರಿತು ಪುನರ್ ಪರಿಶೀಲಿಸಲು ಸರ್ಕಾರಕ್ಕೆ ಪತ್ರ ಬರೆಯುವಂತೆ ಎ.ನಾಗರಾಜ್ ಹೇಳಿದಾಗ, ವಿಪಕ್ಷ ನಾಯಕ ಪ್ರಸನ್ನಕುಮಾರ್, ಎಸ್.ಟಿ. ವೀರೇಶ್ ಸೇರಿದಂತೆ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು.**
**ಈಗಾಗಲೇ ಹೆಸರಿಡಲು ಸರ್ಕಾರದಿಂದ ಅನುಮೋದನೆಗೊಂಡಿದೆ. ಎಲ್ಲವೂ ನಿಯಮ ಪ್ರಕಾರವೇ ನಡೆದಿದೆ. ಆದ್ದರಿಂದ ಈ ಬಗ್ಗೆ ಚರ್ಚೆ ಅಪ್ರಸ್ತುತ ಎಂದರು. ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾದ ಹಿನ್ನೆಲೆಯಲ್ಲಿ ಪುನರ್ ಪರಿಶೀಲಿಸುವಂತೆ ನಾಗರಾಜ್ ಹೇಳಿದಾಗ, ನೀವು ಯಾವುದಕ್ಕೆ ಯಾರ ಹೆಸರು ನಾಮಕರಣ ಮಾಡಿದ್ದೀರಿ ಎಲ್ಲವನ್ನೂ ಪರಿಶೀಲನೆಗೆ ಕಳುಹಿಸೋಣ ಎಂದು ವೀರೇಶ್ ಹೇಳಿದರು. ಅನಧಿಕೃತವಾಗಿ ಹೆಸರಿಟ್ಟರೆ ಎಲ್ಲದನ್ನೂ ತೆಗೆಯಲಿ. ಅದಕ್ಕೆ ನನ್ನ ಸಹಮತ ಇದೆ ಎಂದು ನಾಗರಾಜ್ ಹೇಳಿದರು. ಈ ಕುರಿತು ಪರ-ವಿರೋಧದ ಚರ್ಚೆಗಳೂ ನಡೆದವು. ಪಾಲಿಕೆಯ ಸಭಾಂಗಣಕ್ಕೆ ಶಾಮನೂರು ಶಿವಶಂಕರಪ್ಪ ಹೆಸರಿಟ್ಟ ಕುರಿತು 1 ತಾಸಿನೊಳಗೆ ದಾಖಲೆ ನೀಡುವಂತೆ ಎಸ್.ಟಿ. ವೀರೇಶ್ ಪಟ್ಟು ಹಿಡಿದರು.**
**ಖಾಸಗಿ ಬಸ್ ನಿಲ್ದಾಣಕ್ಕೆ ಶಾಮನೂರು ಶಿವಶಂಕರಪ್ಪ ಹೆಸರಿಟ್ಟ ಬಗ್ಗೆಯೂ ಚರ್ಚೆ ನಡೆದು, ಕಾಂಗ್ರೆಸ್-ಬಿಜೆಪಿ ಸದಸ್ಯರು ಪರಸ್ಪರ ವಾಗ್ವಾದ ನಡೆಸಿದರು. ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಿ ಯೇ ಹೆಸರಿಡಲಾಗಿದೆ ಎಂದು ನಾಗಾಜ್ ಹೇಳಿ ದರೆ, ಈ ಕುರಿತು ಸರ್ಕಾರದ ಆದೇಶವಿದೆಯೇ? ಎಂದು ಪ್ರಸನ್ನಕುಮಾರ್ ಪ್ರಶ್ನಿಸಿದರು.**

### 20 ಕೋಟಿ ರೂ. ಹಗರಣ: ಗೋಣೆಪ್ಪ ಆರೋಪ ಅಧಿಕಾರಿಗಳ ವರ್ತನೆಗೆ ಸದಸ್ಯರ ಆಕ್ರೋಶ

ಆಶ್ರಯ ಯೋಜನೆಯಲ್ಲಿ 20 ಕೋಟಿ ರೂ.ಗೂ ಹೆಚ್ಚು ಅವ್ಯವಹಾರ ನಡೆದಿದೆ. ಇದರಲ್ಲಿ ಭಾಗಿಯಾದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸದಸ್ಯ ಎಲ್.ಡಿ. ಗೋಣೆಪ್ಪ ಒತ್ತಾಯಿಸಿದರು. 6ನೇ ವಾರ್ಡ್ ಎಸ್.ಎಂ. ಕೃಷ್ಣ ನಗರದಲ್ಲಿ ಸರ್ವೇ ನಂ.135ರಲ್ಲಿ 7 ಜನರಿಗೆ ಆಶ್ರಯ ಮನೆ ನಿರ್ಮಾಣಕ್ಕೆ ಅಧಿಕಾರಿ ಗೋವಿಂದನಾಯ್ಕ ಪತ್ರ ಕೊಟ್ಟಿದ್ದಾರೆ. ಇದರಲ್ಲಿ ಆಯುಕ್ತರು ಹಾಗೂ ಶಾಸಕರ ಸಹಿಯೂ ಇದೆ. ಖಾತೆ ಮಾಡಿ ಖಾತಾ ಎಕ್ಸ್‌ಟ್ರಾಕ್ಟ್ ಸಹ ಕೊಡಲಾಗಿದೆ. ಇದೀಗ ಫಲಾನುಭವಿಗಳು ಮನೆ ನಿರ್ಮಿಸಲು ಹೋದಾಗ ಅಲ್ಲಿ ಜಾಗವೇ ಇಲ್ಲ ಎಂದು ಹೇಳಿದರು.

ಇದೇ ರೀತಿ ಗೋವಿಂದನಾಯ್ಕ ಅವರು ಅವ್ಯವಹಾರ ನಡೆಸಿದ್ದಾರೆ. ಪಾಲಿಕೆಯಿಂದ ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಎಂದರು. ಸದಸ್ಯ ಅಜಯ್ ಕುಮಾರ್, ಸಿಎ ಸೈಟ್‌ಗಳಿಗೂ ಇ ಸ್ವತ್ತು ಕೊಡಲಾಗಿದೆ. ಇ-ಸ್ವತ್ತು ಕೊಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದರು.

ಪಾಲಿಕೆ ಸದಸ್ಯರು, ಆಯುಕ್ತರು ಬದಲಾಗುತ್ತಾರೆ. ಆದರೆ ಇಲ್ಲಿನ ಅಧಿಕಾರಿಗಳು ಮಾತ್ರ ಎಷ್ಟು ವರ್ಷಗಳಾದರೂ ಬದಲಾಗುವುದಿಲ್ಲ. ಕೂಡಲೇ ಎರಡು, ಮೂರು ವರ್ಷಗಳಿಗೊಮ್ಮೆ ಅಧಿಕಾರಿಗಳನ್ನು ಬದಲಿಸಿ. ಇಲ್ಲದಿದ್ದರೆ ಅವರ ಉದ್ಧಟತನ ಹೆಚ್ಚಾಗುತ್ತದೆ ಎಂದು ಆಗ್ರಹಿಸಿದರು.

ಎ.ನಾಗರಾಜ್ ಮಾತನಾಡಿ, ಪಾಲಿಕೆ ಅಧಿಕಾರಿಗಳ ಮೇಲೆ ಲೋಕಾಯುಕ್ತ ದಾಳಿ ನಡೆಯುತ್ತಿದೆ ಎಂದರೆ ಅದು ದಾವಣಗೆರೆಗೇ ಅವಮಾನ. ಅಂತಹ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ? ಎಂದು ಆಯುಕ್ತರನ್ನು ಪ್ರಶ್ನಿಸಿದರು. ಕಳೆದ ಎರಡ್ಮೂರು ವರ್ಷಗಳಿಂದ ನಕಲಿಯಾಗಿ ಸ್ವತ್ತುಗಳನ್ನು ಕೊಡಲಾಗಿದೆ ಎಂದಾಗ, ವಿಪಕ್ಷ ನಾಯಕ ಪ್ರಸನ್ನ ಕುಮಾರ್ ಆಕ್ಷೇಪಿಸಿದರು.

ರೆವಿನ್ಯೂ ಇನ್‌ಸ್ಪೆಕ್ಟರ್ ತಿಮ್ಮರಾಜು ಸದಸ್ಯರ ಬಗ್ಗೆ ಕೇವಲವಾಗಿ ಮಾತನಾಡುತ್ತಾರೆ ಎಂದು ಆರೋಪಿಸಿದಾಗ, ಮತ್ತೋರ್ವ ಸದಸ್ಯ ಬಿ.ಜಿ. ಅಜಯ್ ಕುಮಾರ್, ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರಿ ಆಯುಕ್ತರಿಗಿದ್ದು, ಕ್ರಮಕ್ಕೆ ಆಗ್ರಹಿಸಿದರು. 5 ವರ್ಷ ಮೇಲ್ಪಟ್ಟು ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳನ್ನು ವರ್ಗಾವಣೆ ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆಯುವಂತೆ ಮೇಯರ್ ಅವರಿಗೆ ಮನವಿ ಮಾಡಿದರು.

### ಪೌರ ಕಾರ್ಮಿಕರ ನೇಮಕಕ್ಕೆ ಬೇಕು 10 ಕೋಟಿ

ನಗರದಲ್ಲಿ 740 ಜನರಿಗೆ ಒಬ್ಬರು ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳಬಹುದು. ಈ ವರ್ಷ 50 ಜನರು ನಿವೃತ್ತಿ ಹೊಂದಿದ್ದಾರೆ. ಪ್ರಸ್ತುತ 450 ಜನ ಕಾರ್ಮಿಕರಿದ್ದಾರೆ. 300 ಜನರ ನೇಮಕಕ್ಕೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆದು ಟೆಂಡರ್ ಕರೆಯಬೇಕಿದೆ ಎಂದು ಆಯುಕ್ತರಾದ ರೇಣುಕಾ ಹೇಳಿದರು. ಪೌರ ಕಾರ್ಮಿಕರಿಗೆ ವಿಶೇಷ ಭತ್ಯೆ ಸೇರಿ ಮಾಸಿಕ ಕನಿಷ್ಟ 22 ಸಾವಿರ ರೂ. ಪಾವತಿಸಬೇಕಾಗುತ್ತದೆ. ಕನಿಷ್ಟ 10 ಕೋಟಿ ರೂ. ಬೇಕಾಗುತ್ತದೆ ಪಾಲಿಕೆಯ ಆರ್ಥಿಕ ಸ್ಥಿತಿ-ಗತಿ ನೋಡಿ ನೇಮಿಸಿಕೊಳ್ಳಬೇಕಾಗುತ್ತದೆ ಎಂದರು. ಮೇಯರ್ ವಿನಾಯಕ್, 300 ಜನರನ್ನು ನೇಮಿಸಿಕೊಳ್ಳುವಂತೆ ಸೂಚಿಸಿದರು.

### ಹಕ್ಕುಪತ್ರ ಏಕೆ ವಿತರಿಸಿಲ್ಲ: ಕೆ.ಎಂ. ವೀರೇಶ್

33ನೇ ವಾರ್ಡ್ ಸದಸ್ಯ ಕೆ.ಎಂ. ವೀರೇಶ್ ಮಾತನಾಡುತ್ತಾ, ನನ್ನ ವಾರ್ಡ್‌ನಲ್ಲಿ ನಿವೇಶನಗಳ ಹಕ್ಕುಪತ್ರ ಅನುಮೋದನೆಗೊಂಡಿದ್ದರೂ ವಿತರಿಸುತ್ತಿಲ್ಲ ಎಂದು ದಾಖಲೆ ಸಹಿತ ಆರೋಪಿಸಿದರು.

ನಿವಾಸಿಗಳು ನಿತ್ಯವೂ ಮನೆ ಬಾಗಿಲಿಗೆ ಬರುತ್ತಿದ್ದಾರೆ. ಉತ್ತರಿಸುವುದೇ ಕಷ್ಟವಾಗಿದೆ ಎಂದರು. ಹಕ್ಕುಪತ್ರ ನೀಡದಿರಲು ಕಾರಣ ಕೇಳಿದರೆ ಮೇಯರ್ ಹಾಗೂ ಆಯುಕ್ತರು ಉತ್ತರಿಸುತ್ತಿಲ್ಲ. ಲೋಕಾಯುಕ್ತರಿಂದ ನೋಟೀಸ್ ಏನಾದರೂ ಬಂದಿದ್ದರೆ ತೋರಿಸಿ ಎಂದು ವೀರೇಶ್ ಸಭೆಯಲ್ಲಿ ಹೇಳಿದರು.

ಮಾರ್ಚ್‌ನಲ್ಲಿಯೇ ಅನುಮೋದನೆಗೊಂಡು ಹಕ್ಕುಪತ್ರ ಬಂದಿದ್ದರೂ ಏಕೆ ವಿತರಣೆಯಾಗಿಲ್ಲ? ಎಂದು ಪ್ರಸನ್ನಕುಮಾರ್ ಪ್ರಶ್ನಿಸಿದರು.

ಹಕ್ಕುಪತ್ರ ವಿತರಣೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಲೋಕಾಯುಕ್ತರಿಗೆ ದೂರು ಹೋಗಿದ್ದ ಹಿನ್ನೆಲೆಯಲ್ಲಿ ಅವರ ಸೂಚನೆ ಮೇರೆಗೆ ಹಕ್ಕು ಪತ್ರ ವಿತರಿಸುತ್ತಿಲ್ಲ ಎಂದರು. ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಉದ್ಯಾನವನ ಹಾಗೂ ರಸ್ತೆಯಲ್ಲಿ 2009ಕ್ಕಿಂತ ಮುಂಚೆ ನಿರ್ಮಿತವಾದ ದೇವಸ್ಥಾನಗಳನ್ನು ಅಧಿಕೃತಗೊಳಿಸಲು ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಚರ್ಚ್ ಹಾಗೂ ಮಸೀದಿಗಳ ಬಗ್ಗೆ ಏಕೆ ಪ್ರಸ್ತಾಪಿಸಿಲ್ಲ ? ಎಂದು ಕೆ.ಎಂ. ವೀರೇಶ್ ಇದೇ ವೇಳೆ ಪ್ರಶ್ನಿಸಿದರು.

# ನವೆಂಬರ್‌ನಲ್ಲೂ ವಾಡಿಕೆಗಿಂತ ಹೆಚ್ಚಿನ ತಾಪಮಾನ

ನವದೆಹಲಿ, ಅ. 31 – ನವೆಂಬರ್ ತಿಂಗಳಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಟ್ಟದ ತಾಪಮಾನ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಕಳೆದ ಅಕ್ಟೋಬರ್‌ನಲ್ಲಿ ತಾಪಮಾನ ವಾಡಿಕೆಗಿಂತ ಹೆಚ್ಚಾಗಿತ್ತು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಹವಾಮಾನ ಇಲಾಖೆ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ, ನವೆಂಬರ್ ತಿಂಗಳಲ್ಲಿ ದೇಶಾದ್ಯಂತ ಮಳೆಯ ಪ್ರಮಾಣ ದೀರ್ಘಾವಧಿ ಸರಾಸರಿಯ ಶೇ.77.123ರಷ್ಟಿರಲಿದೆ ಎಂದಿದ್ದಾರೆ. ದಕ್ಷಿಣ ಪ್ರಸ್ಥಭೂಮಿಯ ಕೆಲವೆಡೆ ಸಾಮಾನ್ಯಕ್ಕಿಂತ ಹೆಚ್ಚು ಮಳೆಯಾಗಲಿದೆ. ವಾಯುವ್ಯ ಭಾಗದ ಬಹುತೇಕ ಕಡೆ ಹಾಗೂ ಪೂರ್ವ – ಮಧ್ಯ, ಪೂರ್ವ ಹಾಗೂ ಈಶಾನ್ಯದಲ್ಲಿ ಮಳೆ ಸಾಮಾನ್ಯಕ್ಕಿಂತ ಹೆಚ್ಚಿರಲಿದೆ ಎಂದವರು ತಿಳಿಸಿದ್ದಾರೆ.

# 2024-25ರಿಂದ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೆ ಶ್ರೇಯಾಂಕ

ನವದೆಹಲಿ, ಅ. 31 – 2024-25ರ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳೆರಡಕ್ಕೂ ಶಿಕ್ಷಣದ ಗುಣಮಟ್ಟ ಆಧರಿಸಿ ಶ್ರೇಯಾಂಕ ನೀಡಲಾಗುವುದು.

ಶ್ರೇಯಾಂಕ ರೂಪಿಸುವ ಸಲುವಾಗಿ ಭಾರತೀಯ ಗುಣಮಟ್ಟ ಮಂಡಳಿ (ಕ್ಯೂ.ಸಿ.ಐ.) ಜೊತೆ ರಾಷ್ಟ್ರೀಯ ವೈದ್ಯಕೀಯ ಆಯೋಗ ಒಪ್ಪಂದವೊಂದಕ್ಕೆ ಸಹಿ ಹಾಕಿದೆ.


ಪ್ರಸಕ್ತ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಮಾತ್ರ ಎನ್.ಐ.ಆರ್.ಎಫ್. ಶ್ರೇಯಾಂಕದ ಮಾನದಂಡಕ್ಕೆ ಒಳಪಟ್ಟಿವೆ.


## ಅಭಿನಂದನೆಗಳು



ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ **ನಿಜಗುಣಾನಂದ ಶ್ರೀಗಳಿಗೆ** ಭಕ್ತಿಪೂರ್ವಕ ನಮನಗಳನ್ನು ಸಲ್ಲಿಸಿ, ಶ್ರೀಗಳಿಗೆ ಪ್ರಶಸ್ತಿಯನ್ನು ನೀಡಿ ಅದರ ಗೌರವವನ್ನು ಇಮ್ಮಡಿಗೊಳಿಸಿದ ಸರ್ಕಾರಕ್ಕೆ ಅಭಿನಂದನೆಗಳು.

**ಅಧ್ಯಕ್ಷರು, ಆಡಳಿತ ಮಂಡಳಿ ಹಾಗೂ ಸರ್ವಸದಸ್ಯರು ಮತ್ತು ಸಿಬ್ಬಂದಿ ವರ್ಗ**
**ಶ್ರೀ ಗಂಗಾ ವಿವಿದ್ದೋದ್ದೇಶ ಸಹಕಾರಿ ಸಂಘ, ರಾಣೇಬೆನ್ನೂರು**



## ಹುಟ್ಟುಹಬ್ಬದ ಶುಭಾಶಯಗಳು

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಶುಭಾಶಯ ಕೋರುವುದರ ಜೊತೆಗೆ ಇಂದು 80ನೇ ಜನ್ಮದಿನ ಆಚರಿಸಿಕೊಳ್ಳುತ್ತಿರುವ ನಮ್ಮ ಆತ್ಮೀಯ ನಾಯಕರು, ವಿಧಾನಸಭಾ ಮಾಜಿ ಸಭಾಪತಿಗಳಾದ

**ಸನ್ಮಾನ್ಯ ಶ್ರೀ ಕೆ.ಬಿ. ಕೋಳಿವಾಡ**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು...





**ರವೀಂದ್ರಗೌಡ ಎಫ್. ಪಾಟೀಲ್**
ರೈತ ಮುಖಂಡರು, ರಾಣೇಬೆನ್ನೂರು


# ಜಿಲ್ಲೆಯ ಮೂವರು ಸಾಧಕರು, ಸಂಘಕ್ಕೆ ರಾಜ್ಯೋತ್ಸವ ಪ್ರಶಸ್ತಿ

ದಾವಣಗೆರೆ, ಅ.31- ಜಿಲ್ಲೆಯ ಟಿ.ಶಿವಶಂಕರ್, ಶಿವಂಗಿ ಶಣ್ಮರಿ, ಕೆ.ರೂಪ್ಲಾನಾಯಕ್ ಹಾಗೂ ಮೌಲಾನಾ ಆಜಾದ್ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಾಂಸ್ಕೃತಿಕ ಸಂಘಕ್ಕೆ ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುತ್ತಿದೆ.

**ಟಿ. ಶಿವಶಂಕರ್:** ದಾವಣಗೆರೆ ಸರಸ್ವತಿ ನಗರ ಬಿ ಬ್ಲಾಕ್ ವಾಸಿ ಟಿ.ಶಿವಶಂಕರ್, ಗೋಪುರ ಹಾಗೂ ಶಿಲ್ಪಗಳನ್ನು ನಿರ್ಮಿಸುವುದರಲ್ಲಿ ಪರಿಣಿತರು. ಇದನ್ನು ಕಾಯಕದ ಕ್ಷೇತ್ರವಾಗಿರಿಸಿಕೊಂಡು ಅಲೆಮಾರಿ ಜೀವನ ಸಾಗಿಸುತ್ತಿದ್ದಾರೆ. ಈವರೆಗೂ 400ಕ್ಕೂ ಹೆಚ್ಚು ದೇವಾಲಯಗಳ ಗೋಪಾರ ನಿರ್ಮಿಸಿದ್ದಾರೆ. 1988ರಷ್ಟು ಹಿಂದೆಯೇ ಹರಪನಹಳ್ಳಿ ತಾಲ್ಲೂಕು ಅರಸೀಕೆರೆಯ ಶ್ರೀ ಕೋಲಶಾಂತೇಶ್ವರ ವಿರಕ್ತಮಠದ 75 ಅಡಿ ಎತ್ತರದ ರಾಜಗೋಪುರ ನಿರ್ಮಿಸಿ, ಸಿಂಪಿಗ ಶ್ರೇಷ್ಠ ಬಿರುದು ಪಡೆದಿದ್ದಾರೆ.


ಶಿವಶಂಕರ್


ಶಿವಂಗಿ ಶಣ್ಮರಿ


ರೂಪ್ಲಾನಾಯಕ್


ನಸೀರ್ ಅಹ್ಮದ್

**ಶ್ರೀಮತಿ ಶಿವಂಗಿ ಶಣ್ಮರಿ :** ಚನ್ನಗಿರಿ ತಾಲ್ಲೂಕು ಅಸ್ತಾಪನಹಳ್ಳಿ ಗ್ರಾಮದ ಶ್ರೀಮತಿ ಶಿವಂಗಿ ಶಣ್ಮರಿ ಅವರು ಹಕ್ಕಿಪಿಕ್ಕಿ ಬುಡಕಟ್ಟು ಪಂಗಡಕ್ಕೆ ಸೇರಿದ ಜಾನಪದ ಹಾಡುಗಾರ್ತಿ. ಇವರಿಗೀಗ 95 ವರ್ಷ.

ಲಿಪಿಯಿಲ್ಲದ ಮರುಗು ಭಾಷೆಯಾದ ವಾಗ್ರಿಬೋಲಿ ಭಾಷೆಯಲ್ಲಿ, ತಲೆ ತಲಾಂತರದಿಂದ ಹಿರಿಯರ ಕಂಠದಲ್ಲಿ ಕಂಠಸ್ಥವಾಗಿಯೇ ಉಳಿದುಕೊಂಡು ಬಂದಿರುವ, ನೂರಾರು ಹಾಡುಗಳನ್ನು ಚಿಕ್ಕಂದಿನಿಂದಲೇ ಅನುಕರಿಸಿ, ಗೆಳತಿಯರೊಂದಿಗೆ ಹಂಚಿಕೊಂಡು ಬೆಳೆಸಿದವರು.

ಹೀಗೆ ಮದುವೆ ಪದ, ಸೋಬಾನೆ ಪದ, ಹಿರಿದಲೆಗಳು ಬಾಳಿ ಬದುಕಿದ ಸಾಹಸಮಯ ಗಾಥೆಗಳನ್ನು ತೃಣವೂ ವಿಚಲಿತಗೊಳಿಸದೆ, ಒಂದೆರಡು ಬಾರಿ ಕೇಳಿದೊಡನೆಯೇ ಮನದಾಳದ ಪುಟಗಳಲ್ಲಿ ಬಂಧಿಸಿಟ್ಟುಕೊಂಡು ಯಥಾವತ್ ಪುನರುಚ್ಚರಿಸುವಲ್ಲಿ ನಿಸ್ಸೀಮರು.

**ಕೇ.ರೂಪ್ಲಾನಾಯಕ್ :** 105 ವರ್ಷದ ಕುಡಿನೀರ್ ಕಟ್ಟೆ ಗ್ರಾಮದ ರೂಪ್ಲಾನಾಯ್ಕ ಅವರು ಸಿವಿಲ್ ಇಂಜಿನಿಯರ್. ವಿವಿಧ ಜಿಲ್ಲೆಗಳಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾದರು. ನಾಡಿನ ಸಂಸ್ಕೃತಿ ಪರಿಚಯವನ್ನು ಬಂಜಾರ ಜನಾಂಗಕ್ಕೆ ಪ್ರಚುರ ಪಡಿಸಲು ಶ್ರಮವಹಿಸಿದ್ದಾರೆ. ಗುರು ಶ್ರೀ ಸಂತ ಸೇವಾಲಾಲ್ ಕುರಿತ ಇತಿಹಾಸ, ಅವರು ಬೋಧಿಸಿದ ತತ್ವ, ಆದರ್ಶ ಬೋಧನೆ ಬಗ್ಗೆ ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ಪಡಿಸಿದ್ದರು.

ಸೂರಗೊಂಡನಕೊಪ್ಪದಲ್ಲಿ ಸಂತ ಸೇವಾಲಾಲ್ ಮೂರ್ತಿ ಪ್ರತಿಷ್ಠಾಪಿಸಿ ದೇವಸ್ಥಾನಕ್ಕೆ ಅಭಿವೃದ್ಧಿ ಸಮಿತಿ ರಚಿಸಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದವರು.

**ಮೌಲಾನಾ ಆಜಾದ್ ಸಮಾಜ ಕಲ್ಯಾಣ ಮತ್ತು ವಿದ್ಯಾಸಂಸ್ಥೆ:** ಮೌಲಾನಾ ಆಜಾದ್ ಸಮಾಜ ಕಲ್ಯಾಣ ಮತ್ತು ವಿದ್ಯಾಸಂಸ್ಥೆಯು ಸಿ.ಆರ್. ನಸೀರ್ ಅಹ್ಮದ್ ಅವರ ಮಾರ್ಗದರ್ಶನದಲ್ಲಿ ಸುಶಿಕ್ಷಿತ ಶಿಕ್ಷಣ ನೀಡುವಲ್ಲಿ ಪ್ರಗತಿ ಸಾಧಿಸಿದೆ. ಎರಡೂವರೆ ದಶಕಗಳ ಕಾಲ ನಿರಂತರ ವಿದ್ಯಾದಾನ ನೀಡಿದ ಈ ಸಂಸ್ಥೆ ನೂರಾರು ಮಕ್ಕಳಿಗೆ ಅಗತ್ಯ ಪರಿಕರ ನೀಡಿ, ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪೂರಕವಾಗಿ ಶ್ರಮಿಸುತ್ತಿದೆ. ಇದರೊಟ್ಟಿಗೆ ಮೌಲಾನಾ ಆಜಾದ್ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಾಂಸ್ಕೃತಿಕ ಸಂಘವನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಉಳಿದಂತೆ ನೆರೆಯ ಶಿವಮೊಗ್ಗದ ಎ.ಜಿ. ಚಿದಂಬರ್ ರಾವ್ ಜಂಬೆ ಹಾಗೂ ಚಿತ್ರದುರ್ಗದ ಪಿ.ತಿಪ್ಪೇಸ್ವಾಮಿ ರಂಗಭೂಮಿ ಕ್ಷೇತ್ರದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ ಹಾವೇರಿಯ ಸತೀಶ್ ಕುಲಕರ್ಣಿ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

## ಪುನೀತ್ ಹೃದಯ ಜ್ಯೋತಿ ಯೋಜನೆಗೆ ಚಾಲನೆ

ಬೆಂಗಳೂರು, ಅ. 31 – ಹೃದಯಾಘಾತದಿಂದ ಸಾವು ಸಂಭವಿಸುವುದನ್ನು ತಡೆಯಲು 'ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆ'ಯನ್ನು ಜಾರಿಗೆ ತರಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಘೋಷಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೃದಯಾಘಾತಕ್ಕೀಡಾದವರು ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗಳಿಗೆ ತೆರಳಬೇಕಿದೆ. ಇದರಿಂದ ಸಮಯ ಪೋಲಾಗುತ್ತದೆ. ಹೃದಯಾಘಾತದ ಸಂದರ್ಭದಲ್ಲಿ ತ್ವರಿತ ಸೇವೆ ಅತ್ಯಗತ್ಯ. ಈ ಹಿನ್ನೆಲೆಯಲ್ಲಿ ಹೃದಯ ಜ್ಯೋತಿ ಯೋಜನೆ ಜಾರಿಗೆ ತರಲಾಗುತ್ತಿದೆ ಎಂದವರು ಹೇಳಿದರು. ಈ ಯೋಜನೆಯ ಮೂಲಕ, ರಾಜ್ಯದ 16 ಜಿಲ್ಲೆಗಳಲ್ಲಿನ 85 ಸರ್ಕಾರಿ ಆಸ್ಪತ್ರೆ ಹಾಗೂ 50ಕ್ಕೂ ಅಧಿಕ ಖಾಸಗಿ ಆಸ್ಪತ್ರೆಗಳಲ್ಲಿ ಸ್ಪೋಕ್ಸ್ ಹಾಗೂ ಹಬ್ಸ್ ಮಾದರಿಯಲ್ಲಿ ತಪಾಸಣೆ, ಇಸಿಜಿ, ಆಂಜಿಯೋಪ್ಲಾಸ್ಟಿ ಸೇರಿದಂತೆ ಟೆನೆಕ್ಟ್ ಪ್ಲಸ್‌ನಂಥಹ ದುಬಾರಿ ಇಂಜೆಕ್ಷನ್ ಸಹ ಉಚಿತವಾಗಿ ದೊರೆಯಲಿದೆ ಎಂದವರು ತಿಳಿಸಿದರು.



**16 ಜಿಲ್ಲೆಗಳಲ್ಲಿನ 85 ಸರ್ಕಾರಿ, 50 ಖಾಸಗಿ ಆಸ್ಪತ್ರೆಗಳಲ್ಲಿ ಹೃದಯ ತಪಾಸಣೆ, ಚಿಕಿತ್ಸೆಗೆ ವ್ಯವಸ್ಥೆ**

ಇತ್ತೀಚಿನ ಅಧ್ಯಯನದ ಪ್ರಕಾರ ಹೃದಯಾಘಾತಕ್ಕೆ ಸಿಲುಕುತ್ತಿರುವವರಲ್ಲಿ ಶೇ.35ರಷ್ಟು ಜನರು 40 ವರ್ಷದ ಒಳಗಿನವರೇ ಆಗಿದ್ದಾರೆ. ಹೃದಯಾಘಾತ ಸಂಭವಿಸಿದ ಗಂಟೆಯ ಒಳಗೆ ಚಿಕಿತ್ಸೆ ನೀಡಬೇಕಿದೆ. ಇದನ್ನು ಗೋಲ್ಡನ್ ಹವರ್ ಎಂದು ಕರೆಯುತ್ತಾರೆ. ಈ ದೃಷ್ಟಿಯಿಂದ ಹೃದಯ ಜ್ಯೋತಿ ಯೋಜನೆ ಉಪಯುಕ್ತವಾಗಿದೆ ಎಂದರು.

ಈ ಯೋಜನೆಯ ಮೂಲಕ ಹಬ್ ಅಂಡ್ ಸ್ಪೋಕ್ ಮಾದರಿಯಲ್ಲಿ ಚಿಕಿತ್ಸಾ ಕೇಂದ್ರಗಳ ವ್ಯವಸ್ಥೆ ಮಾಡಲಾಗುವುದು. ಜೊತೆಗೆ ಸಾರ್ವಜನಿಕ ಸ್ಥಳಗಳಲ್ಲಿ ಎ.ಇ.ಡಿ. ಉಪಕರಣಗಳ ಅಳವಡಿಕೆ ಮಾಡಲಾಗುವುದು ಎಂದು ಗುಂಡೂರಾವ್ ವಿವರಿಸಿದರು.

ಒಟ್ಟು 85 ಜಿಲ್ಲಾ ಆಸ್ಪತ್ರೆಗಳು ಹಾಗೂ ತಾಲ್ಲೂಕು ಆಸ್ಪತ್ರೆಗಳು ಸ್ಪೋಕ್ ಕೇಂದ್ರಗಳಾಗಲಿವೆ. 16 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಹಬ್‌ಗಳನ್ನು ರೂಪಿಸಲಾಗುವುದು. ಇದರಲ್ಲಿ ಜಯದೇವ ಆಸ್ಪತ್ರೆಯೂ ಸೇರಿದೆ.

ಹೃದಯನೋವುಎದುರಿಸುವಯಾವುದೇ ರೋಗಿ ತಕ್ಷಣವೇ ಸ್ಪೋಕ್ ಕೇಂದ್ರಗಳಲ್ಲಿ ಇ.ಸಿ.ಜಿ.ಗೆ ಒಳಗಾಗಬಹುದು. ತೀವ್ರ ಪರಿಸ್ಥಿತಿಯಲ್ಲಿರುವವರಿಗೆ ಟೆನೆಕ್ಟ್ ಪ್ಲಸ್ ಚುಚ್ಚುಮದ್ದನ್ನು ಉಚಿತವಾಗಿ ನೀಡಲಾಗುವುದು.

ಬಿಪಿಎಲ್ ಹಾಗೂ ಎಪಿಎಲ್ ಕಾರ್ಡುದಾರರಿಬ್ಬರಿಗೂ ಉಚಿತವಾಗಿ ಆರೋಗ್ಯ ಕರ್ನಾಟಕ ಆಯುಷ್ಮಾನ್ ಭಾರತ್ ಕಾರ್ಡ್ ಮೂಲಕ ಚಿಕಿತ್ಸೆ ನೀಡಲಾಗುವುದು.

ರಾಜ್ಯದ 50 ಕಡೆಗಳಲ್ಲಿ ಎ.ಇ.ಡಿ. (ಆಟೋಮೇಟೆಡ್ ಎಕ್ಸ್‌ಟರ್ನಲ್ ಡೆಫಿಬ್ರಿಲೇಟರ್) ಉಪಕರಣಗಳನ್ನು ಅಳವಡಿಸಲಾಗುವುದು ಎಂದು ಸಚಿವರು ತಿಳಿಸಿದರು.

## ಅಕ್ಟೋಬರ್‌ನಲ್ಲಿ ಹಿಂಗಾರು ಕ್ಷೀಣ

ನವದೆಹಲಿ, ಅ. 31 – ಅಕ್ಟೋಬರ್ ತಿಂಗಳಲ್ಲಿ ದಕ್ಷಿಣ ಭಾರತದ ಕೆಲ ಭಾಗಗಳಲ್ಲಿ ಹಿಂಗಾರು 1901ರ ನಂತರ ಆರನೇ ಅತಿ ಕಡಿಮೆ ಮಟ್ಟದಲ್ಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಆಂಧ್ರ ಕರಾವಳಿ, ರಾಯಲ್‌ಸೀಮಾ, ತಮಿಳುನಾಡು ಹಾಗೂ ಪುದುಚೆರಿ, ಕರ್ನಾಟಕ ಒಳನಾಡು ಹಾಗೂ ಕೇರಳ ಒಳಗೊಂಡ ವಿಭಾಗಗಳಲ್ಲಿ ಹಿಂಗಾರು ಕಡಿಮೆ ಇದೆ ಎಂದು ಹವಾಮಾನ ಇಲಾಖೆ ಪ್ರಧಾನ ನಿರ್ದೇಶಕ ಮೃತ್ಯುಂಜಯ ಮೊಹಾಪಾತ್ರ ಹೇಳಿದ್ದಾರೆ.

## ಗಾಜಿನ ಮನೆಯಲ್ಲಿ ಇಂದಿನಿಂದ ಸಾಂಸ್ಕೃತಿಕ ಸಂಭ್ರಮ

ರಾಜ್ಯಕ್ಕೆ ಕರ್ನಾಟಕ ಎಂದು ಮರು ನಾಮಕರಣಗೊಂಡು ನವೆಂಬರ್ 1 ಕ್ಕೆ 50 ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಕರ್ನಾಟಕ ಸಂಭ್ರಮ-50 ರ ಅಂಗವಾಗಿ ವಿಶೇಷ ಕಾರ್ಯಕ್ರಮಗಳನ್ನುಹಮ್ಮಿಕೊಂಡಿದ್ದು ಜಿಲ್ಲಾಡಳಿತವು ನಗರದ ಗಾಜಿನ ಮನೆಯಲ್ಲಿ ನವೆಂಬರ್ ತಿಂಗಳಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ. ಗಾಜಿನ ಮನೆಯಲ್ಲಿ ಸಂಜೆ 6 ಗಂಟೆಯಿಂದ ಕಾರ್ಯಕ್ರಮಗಳು ನಡೆಯಲಿದ್ದು, ನವೆಂಬರ್ 1, 4, 5, 11, 19 ಹಾಗೂ 26 ರಂದು ಸಾಂಸ್ಕೃತಿಕ ಸಂಜೆ ಕಾರ್ಯಕ್ರಮಗಳು ಜರುಗಲಿವೆ. ಜಾನಪದ, ಜಾದೂ, ಸಂಗೀತ, ನೃತ್ಯ ಕಾರ್ಯಕ್ರಮಗಳು ಜರುಗಲಿವೆ. ಸಾರ್ವಜನಿಕರು, ಶಾಲಾ, ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಬಹುದು.

## ಚುನಾವಣಾ ಬಾಂಡ್‌ಗಳಿಂದ ಪ್ರಜಾಪ್ರಭುತ್ವ ನಾಶ : ಸುಪ್ರೀಂ ಕೋರ್ಟ್

ನವದೆಹಲಿ, ಅ. 31 – ಚುನಾವಣಾ ಬಾಂಡ್ ಯೋಜನೆಗಳು ಅಪಾರದರ್ಶಕವಾಗಿದ್ದರೆ ಪ್ರಜಾಪ್ರಭುತ್ವ ನಾಶವಾಗುತ್ತದೆ. ಇದು ಭ್ರಷ್ಟಾಚಾರಕ್ಕೆ ಉತ್ತೇಜನ ನೀಡುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಅಪಾರದರ್ಶಕ ಚುನಾವಣಾ ನಿಧಿಯಿಂದಾಗಿ ಆಡಳಿತಾರೂಢ ಹಾಗೂ ವಿರೋಧ ಪಕ್ಷಗಳಿಗೆ ಸಮಾನ ಅವಕಾಶ ಸಿಗುವುದಿಲ್ಲ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ಚುನಾವಣಾ ಬಾಂಡ್‌ಗಳನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಎ.ಡಿ.ಆರ್. ಎಂಬ ಸರ್ಕಾರೇತರ ಸಂಘಟನೆ ಅರ್ಜಿ ದಾಖಲಿಸಿದೆ. ಈ ಅರ್ಜಿಯ ವಿಚಾರಣೆ ನಡೆಸುವಾಗ ಸುಪ್ರೀಂ ಕೋರ್ಟ್ ಬಾಂಡ್‌ಗಳ ಬಗ್ಗೆ ಟಿಪ್ಪಣಿ ಮಾಡಿದೆ.

## ಬೆಳಗಾವಿಗೆ ಬರದಂತೆ ಮಹಾರಾಷ್ಟ್ರದ ಸಚಿವ, ಸಂಸದರಿಗೆ ನಿರ್ಬಂಧ

ಬೆಂಗಳೂರು, ಅ. 31 – ಕರ್ನಾಟಕ ರಾಜ್ಯೋತ್ಸವದ ಸಮಯದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂ.ಇ.ಎಸ್.) ಬೆಳಗಾವಿಯಲ್ಲಿ ಆಯೋಜಿಸಲು ಉದ್ದೇಶಿಸಿದ್ದ ಕರಾಳ ದಿನಾಚರಣೆಗೆ ಜಿಲ್ಲಾಡಳಿತ ನಿಷೇಧಿಸಿದೆ. ಮಹಾರಾಷ್ಟ್ರದ ಸಚಿವರಾದ ಶಂಭುರಾಜೇ ದೇಸಾಯಿ, ಚಂದ್ರಕಾಂತ್ ಪಾಟೀಲ್, ದೀಪಕ್ ಕೇಸರ್ಕರ್ ಹಾಗೂ ಸಂಸದ ಧೈರ್ಯಶೀಲ್ ಮಾನೆ ಅವರು ಬೆಳಗಾವಿ ಪ್ರವೇಶಿಸಬಾರದು ಎಂದೂ ನಿರ್ಬಂಧಿಸಲಾಗಿದೆ.

ಕರ್ನಾಟಕ ಇಲ್ಲವೇ ಕನ್ನಡ ವಿರೋಧಿ ಚಟುವಟಿಕೆ ನಡೆಸಿದರೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ಎಚ್ಚರಿಸಿದ್ದಾರೆ.

ಸಚಿವರು ಹಾಗೂ ಸಂಸದರು ಬೆಳಗಾವಿಗೆ ಬಂದಲ್ಲಿ ಪ್ರಚೋದನಕಾರಿಯಾಗಿ ಮಾತನಾಡಬಹುದು. ಈ ವೇಳೆ ಕನ್ನಡ ಪರ ಕಾರ್ಯಕರ್ತರು ಅವರನ್ನು ಘೇರಾವ್ ಮಾಡಬಹುದು ಹಾಗೂ ಇದು ಎಂ.ಇ.ಎಸ್. ಕಾರ್ಯಕರ್ತರ ಜೊತೆ ಸಂಘರ್ಷಕ್ಕೆ ಕಾರಣವಾಗಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.

## ಅಕ್ಟೋಬರ್‌ನಲ್ಲೂ ಕೃಪೆ ತೋರದ ಮಳೆ

### ದಾವಣಗೆರೆಯಲ್ಲಿ ಶೇ.92ರಷ್ಟು ಮಳೆ ಕೊರತೆ

ಬೆಂಗಳೂರು, ಅ. 31 – ಅಕ್ಟೋಬರ್ ತಿಂಗಳಲ್ಲೂ ರಾಜ್ಯದಲ್ಲಿ ಮಳೆಯ ತೀವ್ರ ಕೊರತೆಯಾಗಿದೆ. ಈ ತಿಂಗಳಲ್ಲಿ ವಾಡಿಕೆ ಮಳೆ ಪ್ರಮಾಣ 128.5 ಮಿ.ಮೀ. ಆಗಿದ್ದರೆ, ವಾಸ್ತವಿಕವಾಗಿ ಬಂದಿರುವ ಮಳೆಯ ಪ್ರಮಾಣ 48.5 ಮಿ.ಮೀ. ಮಾತ್ರ.

ಅಕ್ಟೋಬರ್ ತಿಂಗಳಲ್ಲಿ ರಾಜ್ಯದಲ್ಲಿ ವಾಡಿಕೆಗಿಂತ ಶೇ.62ರಷ್ಟು ಕಡಿಮೆ ಮಳೆಯಾಗಿದೆ. ಕರಾವಳಿ ಕರ್ನಾಟಕದಲ್ಲಿ ಶೇ.32, ಉತ್ತರ ಒಳನಾಡಿನಲ್ಲಿ ಶೇ.90 ಹಾಗೂ ದಕ್ಷಿಣ ಒಳನಾಡಿನಲ್ಲಿ ಶೇ.53ರಷ್ಟು ಮಳೆ ಕೊರತೆಯಾಗಿದೆ.


ದಾವಣಗೆರೆ ಜಿಲ್ಲೆಯಲ್ಲಿ ಅಕ್ಟೋಬರ್‌ನಲ್ಲಿ ವಾಡಿಕೆ ಮಳೆ ಪ್ರಮಾಣ 108.1 ಮಿ.ಮೀ. ಆಗಿದೆ. ಆದರೆ, ವಾಸ್ತವಿಕವಾಗಿ ಕೇವಲ 8.7 ಮಿ.ಮೀ. ಮಳೆ ಸುರಿದಿದೆ. ಒಟ್ಟಾರೆ ಮಳೆಯಲ್ಲಿ ಶೇ.92ರ ಕೊರತೆಯಾಗಿದೆ.

ಕೊಡಗಿನಲ್ಲಿ ವಾಡಿಕೆಗಿಂತ ಶೇ.11 ಹಾಗೂ ಮೈಸೂರಿನಲ್ಲಿ ವಾಡಿಕೆಗಿಂತ ಶೇ.16ರಷ್ಟು ಹೆಚ್ಚು ಮಳೆಯಾಗಿದೆ.


ಡಾ|| ಸೋಮಶೇಖರ್. ಎಸ್.ಎ.
ಕೀಲು, ಮೂಳೆ ತಜ್ಞರು Rheumatologist
(ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ಇಂದು ದಿನಾಂಕ : 1.11.2023ರ ಬುಧವಾರ
ನಾಳೆ ದಿನಾಂಕ : 2.11.2023ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ. 08192-222292



ವಿದೇಶ ಪ್ರವಾಸ ಶುಭ ಹಾರೈಕೆ


ಕೆ. ರೇಣುಕಾಚಾರ್


ವಿ. ರಾಘವೇಂದ್ರಚಾರಿ

ದಿನಾಂಕ : 02.11.2023 ರಂದು ದುಬೈ ವಿದೇಶ ಪ್ರವಾಸ ಕೈಗೊಂಡಿರುವ
ಶ್ರೀಮತಿ ಮತ್ತು ಶ್ರೀ ರೇಣುಕಾಚಾರ್
ಶ್ರೀಮತಿ ಮತ್ತು ಶ್ರೀ ರಾಘವೇಂದ್ರಚಾರಿ (VVC)
ಮತ್ತು ಪ್ರವಾಸ ಕೈಗೊಂಡಿರುವ ಎಲ್ಲಾ ಕುಟುಂಬದವರಿಗೂ
ಪ್ರಯಾಣ ಸುಖಕರವಾಗಿರಲೆಂದು ಶುಭ ಹಾರೈಸುವವರು...
✦ ಡಿ. ತಿಪ್ಪೇಸ್ವಾಮಿ ✦ ಶ್ರೀ ಶೈಲಾಚಾರಿ ✦ ಜಿ. ದಿಲೀಪ್
✦ ಕಂಬಳಿ ನಿಜಗುಣ ಶಿವಯೋಗಿ ✦ ಕೆ. ಗಿರೀಶ್


## ಶ್ರೀಮತಿ ಶಾಂತಮ್ಮ ಕೋಳೂರು ನಿಧನ



ದಾವಣಗೆರೆ ಕೆ.ಟಿ.ಜೆ ನಗರ, 1ನೇ ಮೇನ್, 1ನೇ ಕ್ರಾಸ್ ವಾಸಿ
ಬಸವರಾಜ ಕೋಳೂರು ಇವರ ತಾಯಿಯವರಾದ

**ಶ್ರೀಮತಿ ಶಾಂತಮ್ಮ ಕೋಳೂರು**

ಇವರು ದಿನಾಂಕ 31.10.2023 ರ ಮಂಗಳವಾರ ಮಧ್ಯಾಹ್ನ 2.55ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 78 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 01-11-2023 ರ ಬುಧವಾರ ಮಧ್ಯಾಹ್ನ 12.30ಕ್ಕೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ : 94489 44414


ಕೆಲಸಕ್ಕೆ ಬೇಕಾಗಿದ್ದಾರೆ
ಆಫೀಸ್ ಬಾಯ್ - 8
ಸೇಲ್ಸ್‌ಮ್ಯಾನ್ - 8
ಕ್ಲರ್ಕ್ - 8 ಹುಡುಗರು ಮಾತ್ರ
ಎಸ್‌ಎಸ್‌ಎಲ್‌ಸಿ, ಪಿಯುಸಿ,
ಯಾವುದೇ ಡಿಗ್ರಿ, ಪಾಸ್/ಫೇಲ್.
ಸಂಪರ್ಕಿಸಿ :
ಆಪ್ಟಿಕಲ್ ಪ್ಯಾರಡೈಸ್
G-3 ಎಂ.ಎಂ.ಕೆ. ಕಾಂಪ್ಲೆಕ್ಸ್
ಎವಿಕೆ ಕಾಲೇಜ್ ರೋಡ್, ದಾವಣಗೆರೆ.
ಫೋ. : 88614 29090, 85538 63335


## ಪುಣ್ಯಸ್ಮರಣೆ





**ಶ್ರೀ ಮುದೇಗೌಡ್ರು ರೇವಣಸಿದ್ದಪ್ಪ**
(ಜನನ : 01.04.1933 - ನಿಧನ : 01.11.2018)
ನಗರಸಭೆ ಮಾಜಿ ಸದಸ್ಯರು, ಗಣ್ಯ ವರ್ತಕರೂ ಮತ್ತು ಬಾಪೂಜಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷರು
ಇವರ ಐದನೇ ಪುಣ್ಯಸ್ಮರಣೆ

**ಶ್ರೀಮತಿ ದೇವೀರಮ್ಮ ಮುದೇಗೌಡ್ರು ರೇವಣಸಿದ್ದಪ್ಪ**
(ಜನನ : 25.11.1936 - ನಿಧನ : 27.12.2021)
ಇವರ ದ್ವಿತೀಯ ಪುಣ್ಯಸ್ಮರಣೆ

ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ...


ಮಕ್ಕಳು, ಸೊಸೆಯಂದಿರು : ಶ್ರೀ ಶಿವಕುಮಾರ್ ಮುದೇಗೌಡ್ರು, ಶ್ರೀಮತಿ ಸುನಂದ, ಡಾ|| ಬಸವರಾಜ್ ಮುದೇಗೌಡ್ರು, ಶ್ರೀಮತಿ ಗೀತಾ, (Qatar)
ಶ್ರೀ ಸಿದ್ದರಾಮೇಶ್ವರ ಮುದೇಗೌಡ್ರು, ಶ್ರೀಮತಿ ಜಯಶ್ರೀ
ಶ್ರೀ ಸುರೇಶ್‌ಬಾಬು ಮುದೇಗೌಡ್ರು, ಶ್ರೀಮತಿ ರೇಖಾ, ಶ್ರೀಮತಿ ಅಕ್ಷತಾ, ಶ್ರೀ ನಿರೂಪ್
ಮೊಮ್ಮಕ್ಕಳು : ಶ್ರೀಮತಿ ಸುಷ್ಮಾ ಶ್ರೀ ಸಂತೋಷ್, ಶ್ರೀಮತಿ ಸೌಮ್ಯ, ಡಾ|| ರಜನಿಕಾಂತ್ , ಶ್ರೀಮತಿ ಕೈಲಿ (Kylie) ಶ್ರೀ ವರುಣ್ ಎಂ.ಬಿ. North Corolina (USA)
ಆಶೀಶ್ ಎಂ.ಬಿ. Washington DC (USA), ನಿಶಾ, ನಿಖಿಲ್ ಮುದೇಗೌಡ್ರು
ಕು|| ಪೂಜಾ ಮುದೇಗೌಡ್ರು, Little Rock, (USA), ಎಂ. ಪ್ರೀತಲ್, ಅಕಾಂಕ್ಷಾ ಎಂ.
ಮರಿಮೊಮ್ಮಕ್ಕಳು : ಸ್ತುತಿ, ದ್ವಿಜ, ದ್ವಿತಿ, ನಿಯಮ್, ನಿಯಾಮ್ ವರುಣ್ ಮತ್ತು ನೀಲ್ ವರುಣ್.
ದಿ|| ಮುದೇಗೌಡ್ರ ಸಿದ್ದಲಿಂಗಪ್ಪ ಮತ್ತು ಕುಟುಂಬ ವರ್ಗ, ಮುದೇಗೌಡ್ರ ಮನೆತನದವರು
ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗ



Mudegowdra Revanasiddappa Memorial Trust(R)

ಶ್ರೀ ಮುದೇಗೌಡ್ರ ರೇವಣಸಿದ್ದಪ್ಪ ಸ್ಕೂಲ್ ಆಫ್ ಇನ್‌ಫಾರ್ಮೇಷನ್ ಸೈನ್ಸ್ & ಮ್ಯಾನೇಜ್‌ಮೆಂಟ್
BCA., B.com.,
ಉದಯ ಮಾರ್ಟ್ ಎದುರು, ಟಿವಿಎಸ್ ಶೋ ರೂಂ ಪಕ್ಕ, ಹದಡಿ ರಸ್ತೆ, ದಾವಣಗೆರೆ - 05
ಫೋ : 9686450470, e-mail: principal@smr-sism.in


ನಮ್ಮ ಕ್ಯಾನ್ಸರ್ ಮತ್ತು ಕಿಡ್ನಿ ಸ್ಪೆಷಲಿಸ್ಟ್‌ರಿಂದ ಸಮಾಲೋಚನೆ
ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ
• ಮೆಡಿಕಲ್ ಆಂಕೊಲಾಜಿಸ್ಟ್
ಡಾ|| ನಮ್ರತಾ ಉಡುಪ: ಪ್ರತಿ ಗುರುವಾರ
ಡಾ|| ಈರಪ್ಪ ಮದಭಾವಿ: ಪ್ರತಿ ಶನಿವಾರ
• ಕಿಡ್ನಿ (ಮೂತ್ರಪಿಂಡ ಶಾಸ್ತ್ರಜ್ಞರು) ತಜ್ಞರು
ಡಾ|| ಹರೀಶ್ ಕೆ ಆರ್: ಪ್ರತಿ ಗುರುವಾರ
• ಸರ್ಜಿಕಲ್ ಆಂಕೊಲಾಜಿಸ್ಟ್
ಡಾ|| ನಿಶ್ಚಲ್ – ಸೋಮವಾರದಿಂದ ಶನಿವಾರದ ವರೆಗೆ
• ರೇಡಿಯೇಷನ್ ಆಂಕೊಲಾಜಿಸ್ಟ್
ಡಾ|| ಶರಶ್ಚಂದ್ರ – ಪ್ರತಿ ತಿಂಗಳ 2ನೇ ಮತ್ತು 4ನೇ ಗುರುವಾರ




ಮಾಗನೂರು ಬಸಪ್ಪ ರಸ್ತೆ, ತರಳಬಾಳು ಲೇಔಟ್, ದಾವಣಗೆರೆ 08192-260111 / 7022260111


## ಪ್ರಥಮ ವರ್ಷದ ಪುಣ್ಯಸ್ಮರಣೆ



ಜನನ : 03.05.1936
ನಿಧನ 21.11.2022

**ದಿ. ಜೆ. ನಾಗೇಶಪ್ಪನವರು**

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಚಿರಶಾಶ್ವತವಾಗಿದೆ. ನಿಮ್ಮ ಸೃಜನಶೀಲತೆ, ಆದರ್ಶ ಜೀವನ, ಕಾರ್ಯತತ್ಪರತೆ ನಮ್ಮೆಲ್ಲರ ಬಾಳಿನ ದಾರೀದೀಪ.
ಅಚ್ಚ ಹಸಿರಾದ ನಿಮ್ಮ ನೆನಪು ಎಂದೆಂದಿಗೂ ಮರೆಯಾಗದು.
ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲಿ ಸದಾ ಮುನ್ನಡೆಯುತ್ತಿರುವ,
ಶ್ರೀಮತಿ ಹೊನ್ನವ್ವ ಜೆ. ಮೇಗೇರಿ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಜೋಗಳ್ಳೇರ ವಂಶಸ್ಥರು ಹಾಗೂ ಎಲ್ಲಾ ಕುಲ ಬಾಂಧವರು. ಈ ಪುಣ್ಯಾರಾಧನೆಯಲ್ಲಿ ಪಾಲ್ಗೊಂಡು ಇವರ ಆತ್ಮಕ್ಕೆ ಶಾಂತಿ ಕೋರಲೆಂದು ಬಯಸುತ್ತೇವೆ.

#109/1, ರೈತರ ಬೀದಿ, ದಾವಣಗೆರೆ, ಮೊ : 63661 92835, 79757 98845